ಹಣಕಾಸು ಸಾಕ್ಷರತೆಯ ಕೈಪಿಡಿ



ಭಾರತೀಯ ರಿಸರ್ವ್ ಬ್ಯಾಂಕ್

ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ

ಕೇಂದ್ರ ಕಚೇರಿ, ಮುಂಬೈ

ಜನವರಿ 2013

ಹಣಕಾಸು ಸಾಕ್ಷರತೆಯ
ಶಿಬಿರಗಳಲ್ಲಿ
ತರಬೇತುದಾರರ ಕಾರ್ಯ ನಿರ್ವಹಣೆಗೆ ಕೈಪಿಡಿ

(ದಿನಾಂಕ ಜೂನ್ 6, 2012ರ ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂ. ಆರ್‌ಪಿಸಿಡಿ. ಎಫ್‌ಎಲ್‌ಸಿ. ಸಂ.12452/12.01.018/2011–12)

ಭಾರತೀಯ ರಿಸರ್ವ್ ಬ್ಯಾಂಕ್, ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆಯ ಮುಂಬೈನಲ್ಲಿರುವ ಕೇಂದ್ರ ಕಚೇರಿಯು ಈ ಹೊತ್ತಿಗೆಯಲ್ಲಿನ ವಿಷಯಗಳನ್ನು ರೂಪಿಸಿದೆ. ದೇಶದುದ್ದಗಲಕ್ಕೂ ಹಣಕಾಸು ಸಾಕ್ಷರತೆಯ ಕೇಂದ್ರಗಳು ಮತ್ತು ಬ್ಯಾಂಕುಗಳ ಗ್ರಾಮೀಣ ಶಾಖೆಗಳು ತಿಂಗಳಿಗೊಮ್ಮೆ ಸಂಘಟಿಸಲು ಉದ್ದೇಶಿಸಿರುವ ಹಣಕಾಸು ಸಾಕ್ಷರತೆಯ ಶಿಬಿರಗಳಲ್ಲಿ ಈ ಮೇಲಿನ ಮಾರ್ಗದರ್ಶಿ ಸೂತ್ರಗಳನ್ನು ಬಳಸಲಾಗುವುದು. ಈ ಗೈಡ್ www.rbi.org.in ವೆಬ್ ತಾಣದಲ್ಲೂ ಲಭ್ಯವಿದೆ.

ರಚನೆ : ಸುಷ್ಮಾ ವಿಜ್ ಮತ್ತು ಗೀತಾ ನಾಯರ್

ರೇಖಾ ಚಿತ್ರಗಳು : ಆರ್. ಎನ್. ರಹತೆ

ಕನ್ನಡ ಭಾಷಾಂತರ ಪರಿಶೀಲನೆ ಮತ್ತು ದೃಢೀಕರಣ : ಭಾರತೀಯ ರಿಸರ್ವ್ ಬ್ಯಾಂಕ್, ಬೆಂಗಳೂರು

ಮೊದಲ ಮುದ್ರಣ – ಜನವರಿ 2013

ಪ್ರಕಟಣೆ
ಭಾರತೀಯ ರಿಸರ್ವ್ ಬ್ಯಾಂಕ್
ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ
10 ನೇ ಮಹಡಿ, ಕೇಂದ್ರ ಕಚೇರಿ ಕಟ್ಟಡ
ಶಹೀದ್ ಭಗತ್ ಸಿಂಗ್ ಮಾರ್ಗ್
ಫೋರ್ಟ್, ಮುಂಬೈ – 400001

ಕೃತಿ ಸ್ವಾಮ್ಯ :
ಮೂಲವನ್ನು ಸ್ಮರಿಸಿಕೊಂಡರೆ ಮಾತ್ರ ಇದರ ಪುನರ್ಮುದ್ರಣಕ್ಕೆ ಅನುಮತಿ

ಕೃತಜ್ಞತೆ :

ಏಸಿಯನ್ ಇಂಡಿಯಾ, ಇಂಡಿಯನ್ ಸ್ಕೂಲ್ ಆಫ್ ಮೈಕ್ರೋ ಫೈನಾನ್ಸ್ ಫಾರ್ ವಿಮೆನ್(ISMW), ಪರಿನಮ್ ಫೌಂಡೇಶನ್ ಮತ್ತು ಸಂಚಯನ್ ಸೊಸೈಟಿ – ಈ ವಿವಿಧ ಮೂಲಗಳಿಂದ ಲಭ್ಯವಾದ ಮಾಹಿತಿಯನ್ನು ಇಲ್ಲಿ ಸ್ಮರಿಸಲಾಗಿದೆ.

ಮೊದಲ ನುಡಿ

ಹಣಕಾಸು ಸಾಕ್ಷರತೆಯು ಹಣಕಾಸು ಉತ್ಪನ್ನಗಳು ಮತ್ತು ಸೇವೆಗಳಿಗೆ ಬೇಡಿಕೆಯನ್ನು ಒದಗಿಸುತ್ತದೆ. ಆ ಮೂಲಕ ಜನಸಾಮಾನ್ಯರಿಗೆ ಬ್ಯಾಂಕುಗಳು ನೀಡುವ ಹಣಕಾಸು ಉತ್ಪನ್ನಗಳ ಮತ್ತು ಸೇವೆಯ ಉಪಯೋಗ ಮತ್ತು ಅಗತ್ಯತೆಯ ಬಗ್ಗೆ ಅರಿವು ಮೂಡಿಸುತ್ತಾ ಹಣಕಾಸು ಸೇರ್ಪಡೆಯ ಗತಿಯನ್ನು ತೀವ್ರಗೊಳಿಸುತ್ತದೆ. ಸಮಾಜದ ಎಲ್ಲ ಅಂಗಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಹಣಕಾಸು ಸಾಕ್ಷರತೆಯ ಅಗತ್ಯವಿದೆ. ಆದಾಗ್ಯೂ ನಮ್ಮ ಸಮಾಜದ ಬಹು ದೊಡ್ಡ ಭಾಗವು ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗುಳಿದಿದೆ. ಆದ್ದರಿಂದ ಈಗ ಹಣಕಾಸು ಸಾಕ್ಷರತೆಯ ಕಾರ್ಯಕ್ರಮಗಳು ಮೂಲಭೂತವಾಗಿ ತಮ್ಮ ವೈಯಕ್ತಿಕ ಹಣಕಾಸು ವ್ಯವಹಾರವನ್ನು ನಡೆಸಿಕೊಳ್ಳುವುದರ ಬಗ್ಗೆ ತಿಳುವಳಿಕೆಯಿಲ್ಲದೆ ಹಣಕಾಸು ಒತ್ತಡಕ್ಕೆ ಸಿಲುಕಿ ಕೆಳಕ್ಕೆ ತಳ್ಳಲ್ಪಡುತ್ತಿರುವ ದುರ್ಬಲರಾಗಿರುವಂತಹ ಜನರನ್ನು ಕೇಂದ್ರೀಕರಿಸುತ್ತವೆ. ಬ್ಯಾಂಕುಗಳಿಲ್ಲದ ಹಳ್ಳಿಗಳಿಗೆ ನಮ್ಮ 'ಔಟ್ ರೀಚ್' ಕಾರ್ಯಕ್ರಮಕ್ಕೆಂದು ಭೇಟಿ ನೀಡಿದಾಗ ನನ್ನ ಗಮನಕ್ಕೆ ಬಂದ ಮುಖ್ಯ ಸಂಗತಿಯೆಂದರೆ, ಹಣಕಾಸು ಕಾರ್ಯಕ್ರಮಗಳನ್ನು ಉದ್ದೇಶಿತ ಗುಂಪುಗಳಿಗೆ ಪರಿಣಾಮಕಾರಿಯಾಗಿ ತಿಳುವಳಿಕೆ ನೀಡಲು ಅಗತ್ಯವಾದ ಒಂದು ಸಮಾನವಾದ ಪಠ್ಯದ ಕೊರತೆಯೇ ಒಂದು ದೊಡ್ಡ ಸವಾಲಾಗಿದೆ. ವಿವಿಧ ಮೂಲಗಳಲ್ಲಿ ಲಭ್ಯವಿರುವ ಉದ್ದೇಶಿತ ಪ್ರೇಕ್ಷಕರನ್ನು ತಲುಪುವ ಸಂದೇಶದಲ್ಲಿ ಸುಸಂಗತತೆಯನ್ನು ಸಾಧಿಸಲು ಈ ಗೈಡನ್ನು ತಯಾರಿಸಲಾಗಿದೆ. ಇದರಿಂದಾಗಿ ಹಣಕಾಸು ಸಾಕ್ಷರತೆಯು ಹೆಚ್ಚು ವಿಷಯ ಕೇಂದ್ರಿತವೂ, ಉಪಯುಕ್ತವೂ ಆಗುತ್ತದೆ. ಜನ ಸಾಮಾನ್ಯರಲ್ಲಿ ಬ್ಯಾಂಕಿಂಗ್ ಸೇವೆಗಳಿಗೆ ಅತಿ ಹೆಚ್ಚು ಬೇಡಿಕೆಯನ್ನು ಇದು ಹುಟ್ಟುಹಾಕುತ್ತದೆ, ಎಂಬುದರ ಬಗ್ಗೆ ನನಗೆ ವಿಶ್ವಾಸವಿದೆ. ಗ್ರಾಮೀಣ ಶಾಖಾ ವ್ಯವಸ್ಥಾಪಕರು ಮತ್ತು ಮಾರ್ಗದರ್ಶಿ ಜಿಲ್ಲಾ ಬ್ಯಾಂಕ್ ವ್ಯವಸ್ಥಾಪಕರುಗಳು ತಿಂಗಳಿಗೊಮ್ಮೆ ನಡೆಸಬೇಕಾಗಿರುವ ಹಣಕಾಸು ಸಾಕ್ಷರತಾ ಕ್ಯಾಂಪುಗಳಲ್ಲಿ ಬಳಸಲೆಂದೇ ಈ ಗೈಡನ್ನು ಸಿದ್ಧಗೊಳಿಸಲಾಗಿದೆ. ನಗರ ಪ್ರದೇಶಗಳಲ್ಲೂ ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗುಳಿದಿರುವ ವಿವಿಧ ಕ್ಷೇತ್ರದ ಜನರಿಗೆ ಶಿಕ್ಷಣ ನೀಡಲು ಸೂಕ್ತ ಸಂಪ್ರದಾಯವನ್ನು ಹುಟ್ಟುಹಾಕಲು ಇದನ್ನು ಬಳಸಬಹುದಾಗಿದೆ. ಬ್ಯಾಂಕುಗಳು ಹಣಕಾಸು ಸಾಕ್ಷರತೆಯ ಕಾರ್ಯಕ್ರಮಗಳನ್ನು ನಡೆಸಲು ತಮ್ಮ ಆಡಳಿತ ಯಂತ್ರವನ್ನು ಇನ್ನೂ ಚುರುಕುಗೊಳಿಸಿಕೊಳ್ಳಬೇಕಾದ ಅಗತ್ಯವಿದೆ. ಇದರ ಜೊತೆ ಜೊತೆಗೆ ಬ್ಯಾಂಕುಗಳು ಗ್ರಾಹಕ ಸ್ನೇಹಿಯಾಗಿರುವಲ್ಲಿಯೂ ಪ್ರಯತ್ನಿಸಬೇಕು. ಬಡತನದಿಂದ ಆರ್ಥಿಕ ಸಬಲೀಕರಣದ ಸಂಕ್ರಮಣದ ಹಾದಿಯತ್ತ ಸಾಗಲು ಮತ್ತು ಬ್ಯಾಂಕುಗಳಿಗೆ ಲಾಭದಾಯಕವಾದ ವ್ಯವಹಾರದ ಅವಕಾಶ ನೀಡಲು ನಮ್ಮ ಹಣಹಾಸು ಸೇರ್ಪಡೆಯ ಮಾದರಿಯನ್ನು ಸದೃಢವಾಗಿ, ವ್ಯವಹಾರ ಅವಕಾಶಗಳಿಗೆ ತೆರೆದುಕೊಳ್ಳುವಂತೆ ಮಾಡಲು ಇದು ಸಕಾಲ.

(ಕೆ.ಸಿ. ಚಕ್ರಬರ್ತಿ)
ಡೆಪ್ಯುಟಿ ಗವರ್ನರ್

ವಿಷಯ ಸೂಚಿ

ಕ್ರ.ಸಂ	ವಿಷಯ	ಪುಟ ಸಂ.
1.	ತರಬೇತುದಾರರಿಗೆ ಮಾರ್ಗದರ್ಶಕ ಟಿಪ್ಪಣಿ	i - ii
2.	ಹಣಕಾಸು ಸಾಕ್ಷರತಾ ಶಿಬಿರಗಳ ನಿರ್ವಹಣೆ– ಆಚರಣೆಗೆ ಮಾರ್ಗದರ್ಶಿ ಸೂತ್ರಗಳು	iii -v
3.	ನಿಮ್ಮ ಹಣಕಾಸು ನಿರ್ವಹಣೆ	1 – 6
4.	ಉಳಿತಾಯ	7 – 9
5.	ಬ್ಯಾಂಕುಗಳಲ್ಲಿ ಉಳಿತಾಯ	10 – 16
6.	ಸಾಲ ಸೌಲಭ್ಯ	17 – 18
7.	ಬ್ಯಾಂಕುಗಳಿಂದ ಸಾಲ ಸೌಲಭ್ಯ	19 – 22

ಹಣಕಾಸು ಸಾಕ್ಷರತೆ – ತರಬೇತುದಾರರಿಗೆ ಮಾರ್ಗದರ್ಶಕ ಟಿಪ್ಪಣಿ

1. ಹಣಕಾಸು ಸೇರ್ಪಡೆಗೆ ಸಹಕಾರಿಯಾಗುವಂತೆ ಹಣಕಾಸು ಶಿಬಿರಗಳನ್ನು ಏರ್ಪಡಿಸುವಾಗ ಎರಡು ಮುಖ್ಯ ಅಂಶಗಳನ್ನು ಗಮನಿಸಬೇಕು: ಸಾಕ್ಷರತೆ ಮತ್ತು ಹಣಕಾಸು ಸುಲಭವಾಗಿ ಕೈಗೆಟುಕುವ ಲಕ್ಷಣ. ಹಣಕಾಸು ಯೋಜನೆಯನ್ನು ಮಾಡಿಕೊಳ್ಳಲು ನೆರವಾಗುವ ತಿಳುವಳಿಕೆಯನ್ನು ಕೊಡುವಂತಿರಬೇಕು. ಉಳಿತಾಯದ ಹವ್ಯಾಸವನ್ನು ಹುಟ್ಟುಹಾಕುತ್ತಾ, ಹಣಕಾಸು ಉತ್ಪನ್ನಗಳ ಬಗೆಗಿನ ಅರಿವನ್ನು ಹೆಚ್ಚಿಸಿಕೊಂಡು ಪರಿಣಾಮಕಾರಿಯಾಗಿ ಹಣಕಾಸು ಸೇವೆಯನ್ನು ಜನಸಾಮಾನ್ಯನು ಪಡೆಯುವಂತಾಗಬೇಕು. ಬದುಕಿನಲ್ಲಿ ಅನಿರೀಕ್ಷಿತವಾಗಿ ಉಂಟಾಗಬಹುದಾದ ಆಪತ್ಕಾಲೀನ ಸಂದರ್ಭಗಳಲ್ಲಿ ಸಾಲಕ್ಕೆ ಮೊರೆಹೋಗದಂತೆ ಭವಿಷ್ಯ ಜೀವನದ ಅಗತ್ಯಗಳನ್ನು ಮುಂಚಿತವಾಗಿ ಯೋಜಿಸಿಕೊಳ್ಳಲು ಹಣಕಾಸು ಸಾಕ್ಷರತೆಯು ಅವರಿಗೆ ನೆರವಾಗಬೇಕು. ಇದರಿಂದ ಅವರುಗಳು ತಮ್ಮ ಹಣವನ್ನು ನಿರ್ವಹಿಸಲು ತಾವೇ ಮುಂದೆ ಬಂದು ಸಾಲದ ಬಲೆಗೆ ಸಿಲುಕುವುದನ್ನು ತಪ್ಪಿಸಿಕೊಳ್ಳಬೇಕು. ಈ ಕಾರ್ಯಕ್ರಮಗಳ ಮೂಲಕ ನೀಡುವ ತಿಳುವಳಿಕೆಯು ಅವರಿಗೆ ಒಳ್ಳೆಯ ಬ್ಯಾಂಕಿಂಗ್ ಹವ್ಯಾಸಗಳನ್ನು ಹುಟ್ಟುಹಾಕುವುದನ್ನು ಖಾತ್ರಿ ಮಾಡಿಕೊಳ್ಳುತ್ತಾ ಸಾಕ್ಷರತೆಯಲ್ಲಿ ಬಳಸುವ ಸಾಧನಗಳು ಹಣಕಾಸು ಸೇವೆಯ ಸೌಲಭ್ಯಗಳನ್ನು ಪಡೆಯುವಿಕೆಯ ಸಾಧ್ಯತೆಗಳೆರಡೂ ಒಂದಾಗಿ ಮಿಳಿತವಾಗಿ ಮಾಹಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಹಣಕಾಸು ವಿಷಯಗಳ ಬಗ್ಗೆ ನಿಯಂತ್ರಣ ಸಾಧಿಸಲು ಸಾಧ್ಯವಾಗಬೇಕು. ಜೊತೆಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಬಳಸಿಕೊಂಡು ಅವರ ಆರ್ಥಿಕ ಭದ್ರತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಬೇಕು.

2. ಹಣಕಾಸು ಸೇವೆಗಳ ಪೂರೈಕೆದಾರರಾಗಿ ಬ್ಯಾಂಕುಗಳಿಗೆ ಹಣಕಾಸು ಸೇರ್ಪಡೆ ಮತ್ತು ಹಣಕಾಸು ಸಾಕ್ಷರತೆಯ ಪ್ರಸರಣವನ್ನು ಮಾಡುವಲ್ಲಿ ಅಂತರ್ಗತವಾದ ಲಾಭವಿದೆ. ಅದೆಂದರೆ, ಇನ್ನೂ ಬಳಕೆಯಾಗದೆ ಉಳಿದಿರುವ ವ್ಯವಹಾರದ ಅವಕಾಶಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳಬಹುದಾಗಿದೆ. ಇದಕ್ಕೆ ಸಣ್ಣ ಗ್ರಾಹಕನೇ ಮುಖ್ಯವಾದ ಕೀಲಿ ಕೈ ಮತ್ತು ಬ್ಯಾಂಕುಗಳು ಸಮಾಜದ ಕೆಳಹಂತದಲ್ಲಿ ಲಭ್ಯವಾಗುವ ಈ ವ್ಯವಹಾರದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಆದ್ದರಿಂದ ಬ್ಯಾಂಕುಗಳು ಹಣಕಾಸು ಸಾಕ್ಷರತೆಯ ಪ್ರಯತ್ನಗಳನ್ನು ಅವರ ಮುಂದಿನ ಹೂಡಿಕೆಯನ್ನಾಗಿ ಭಾವಿಸಬೇಕು. ಬ್ಯಾಂಕ್ ಖಾತೆಗಳಲ್ಲಿ ವ್ಯವಹಾರವು ಕ್ರಿಯಾಶಾಲಿಯಾಗಿರಲು, ಬ್ಯಾಂಕುಗಳು ಒಂದು ಸಣ್ಣ ಓ.ಡಿ ಸೌಲಭ್ಯ, ವಿವಿಧ ಆವರ್ತನ ಠೇವಣಿಯ ಸೌಲಭ್ಯಗಳು, ಕೆ.ಸಿ.ಸಿ, ವಿವಿಧ ರವಾನೆ ಸೌಲಭ್ಯಗಳ ಗುಚ್ಛವನ್ನು ಖಾತೆದಾರರಿಗೆ ನೀಡಬೇಕು. ಈ ಖಾತೆಗಳಲ್ಲಿ ವ್ಯವಹಾರ ನಡೆಸಲು ಜನರನ್ನು ಪ್ರೋತ್ಸಾಹಿಸಬೇಕು. ಆಗ ಬ್ಯಾಂಕುಗಳಿಗೆ ಈ ಖಾತೆಗಳ ನಿರ್ವಹಣಾ ವೆಚ್ಚವನ್ನು ಅವರಿಂದ ಮುರಿದುಕೊಂಡು ಲಾಭದಾಯಕ ವ್ಯವಹಾರ ನಡೆಸುವುದು ಸಾಧ್ಯವಾಗುತ್ತದೆ. ಬ್ಯಾಂಕುಗಳು ಖಾತೆದಾರರಿಗೆ ಸಾಕಷ್ಟು ಸಾಲಗಳನ್ನು ನೀಡುವ ಅವಕಾಶ ಮಾಡಿಕೊಳ್ಳುವುದು ಗ್ರಾಹಕರ ದೃಷ್ಟಿಯಿಂದ ಮಾತ್ರವಲ್ಲ, ಬ್ಯಾಂಕಿನ ದೃಷ್ಟಿಯಿಂದಲೂ ಮುಖ್ಯವಾಗುತ್ತದೆ. ಸಾಲದ ಬಡ್ಡಿಯಿಂದ ಬರುವ ಆದಾಯವು ಬ್ಯಾಂಕ್ ಉದ್ದಿಮೆಯನ್ನು ಲಾಭದಾಯಕವನ್ನಾಗಿಸುತ್ತದೆ. ಬ್ಯಾಂಕುಗಳು ಸ್ಪರ್ಧಾತ್ಮಕ ದರದಲ್ಲಿ ಸಾಲವನ್ನು ನೀಡಬಹುದು. ಅದು ಶೋಷಣೆಯ ದರವಾಗಿರಬಾರದೆಂಬುದಾದರೂ ತೀರಾ ಅಗ್ಗದ ದರವೂ ಆಗಿರಕೂಡದು.

3. ಬ್ಯಾಂಕಿಂಗ್ ಕ್ಷೇತ್ರದ ವಿವಿಧ ಉತ್ಪನ್ನಗಳ ಬಗ್ಗೆ ಅರಿವು ಮತ್ತು ಜ್ಞಾನವನ್ನು ಸೃಷ್ಟಿಸುತ್ತಾ, ಈ ಉತ್ಪನ್ನಗಳನ್ನು ಗ್ರಾಹಕರ ಮನೆಬಾಗಿಲಿಗೆ ಕೊಂಡೊಯ್ಯುವ ಸೇವೆಯನ್ನು ನೀಡುವುದರ ಮೂಲಕ ಖಾತೆಗಳನ್ನು ತಮ್ಮತ್ತ ಸೆಳೆದುಕೊಳ್ಳುವುದು ಮೊದಲ ಹೆಜ್ಜೆ. ಉಳಿತಾಯದ ಪ್ರಾಮುಖ್ಯತೆ, ಬ್ಯಾಂಕುಗಳಲ್ಲಿ ಉಳಿತಾಯ ಮಾಡುವುದರ

ಲಾಭಗಳು, ಬ್ಯಾಂಕುಗಳು ನೀಡುವ ಇತರ ಸೌಲಭ್ಯಗಳು, ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವುದರ ಲಾಭಗಳು – ಇವುಗಳ ಬಗ್ಗೆ ಸರಳ ಹಾಗೂ ಸ್ಪಷ್ಟ ತಿಳುವಳಿಕೆಯನ್ನು ನೀಡಿ ಜನಸಾಮಾನ್ಯರಲ್ಲಿ ಅವರ ಹಣಕಾಸಿನ ನಿರ್ವಹಣೆಯನ್ನು ಮಾಡಿಕೊಳ್ಳಲು ಜಾಗೃತಿಯನ್ನುಂಟುಮಾಡುವುದು ಈ ಹಣಕಾಸು ಸಾಕ್ಷರತೆಯ ಕೈಪಿಡಿಯ ಮುಖ್ಯ ಉದ್ದೇಶ. ಹಣಕಾಸು ಸಾಕ್ಷರತೆ ಮತ್ತು ಹಣಕಾಸು ಸೇರ್ಪಡೆಯ ಬಗ್ಗೆ ತರಬೇತಿ ನೀಡುವವರಿಗೆ ಈ ಕೈಪಿಡಿ ಸಿದ್ಧ ಮಾಹಿತಿಯನ್ನು ನೀಡುವ ಕೆಲಸ ಮಾಡುತ್ತದೆ. ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗುಳಿದಿರುವ ಜನರನ್ನು ಒಳಕ್ಕೆ ಕರೆದು ತರುವ ಉದ್ದೇಶದಿಂದ ಪ್ರತಿತಿಂಗಳು ನಡೆಸಲಿರುವ ಹಣಕಾಸು ಸಾಕ್ಷರತೆಯ ಶಿಬಿರಗಳಲ್ಲಿ ಎಲ್ಲರಿಗೂ ಅನ್ವಯಿಸುವ ಏಕರೂಪದ ಪಠ್ಯವಾಗಿ ಇದನ್ನು ಬಳಸುವುದರ ಜೊತೆಗೆ, ಈ ಸಾಕ್ಷರತಾ ಶಿಬಿರಗಳ ಕಾರ್ಯಕ್ರಮಗಳಲ್ಲಿ ಹೊಸ ಖಾತೆಗಳನ್ನು ತೆರೆಯುವ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಬೇಕು ಮತ್ತು ಆ ಖಾತೆಗಳು ಸಕ್ರಿಯವಾಗಿರುವಂತೆ ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಲಿರಬೇಕು. ಇದರ ಜೊತೆಗೆ, ಈ ಒಟ್ಟು ಕಾರ್ಯಕ್ರಮದ ಅತಿ ಸೂಕ್ಷ್ಮ ಪರಾಮರ್ಶೆಯನ್ನು ನಡೆಸುವುದರಿಂದ ಖಾತೆಗಳನ್ನು ಸತತವಾಗಿ ಬಳಸುವಂತೆ ಮಾಡಲು ಅಗತ್ಯವಾದ ಅಂಶಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಂತಹ ಎಲ್ಲ ವಿಷಯಗಳನ್ನು ಆದಷ್ಟು ಶೀಘ್ರವಾಗಿ ಬಗೆಹರಿಸಿಕೊಳ್ಳುವಂತಹ ಕಾರ್ಯತಂತ್ರವನ್ನು ರೂಪಿಸಿಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಅಂತಹ ಹಣಕಾಸು ಸಾಕ್ಷರತಾ ಕಾರ್ಯಕ್ರಮಗಳನ್ನು ಸಂಘಟಿಸುವಾಗ, ಸ್ಥಳೀಯ ಸರ್ಕಾರದ ಅಧಿಕಾರಿಗಳ ಮತ್ತು ಹಳ್ಳಿಯ ಪ್ರಮುಖರ ಭಾಗವಹಿಸುವಿಕೆಯೂ ಇರುವಂತೆ ನೋಡಿಕೊಳ್ಳುವುದು ಮೆಚ್ಚತಕ್ಕದ್ದು. ಹಣಕಾಸು ಸಾಕ್ಷರತೆಯ ಕ್ಷೇತ್ರದಲ್ಲಿ ಒಳ್ಳೆಯ ಕಾರ್ಯನಿರ್ವಹಿಸಿದ ಹೆಸರಿರುವ ಸರ್ಕಾರೇತರ ಸಂಘಗಳ ಸಂಯುಕ್ತಾಶ್ರಯದಲ್ಲಿ ಕೂಡ ಈ ಕಾರ್ಯಕ್ರಮವನ್ನು ನಡೆಸುವುದನ್ನು ಬ್ಯಾಂಕುಗಳು ಚಿಂತಿಸಬಹುದಾಗಿದೆ. ಒಟ್ಟಿನಲ್ಲಿ ಈ ಕೈಪಿಡಿಯಲ್ಲಿರುವ ವಿಷಯಗಳನ್ನು ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗೆ ಉಳಿದಿರುವವರಿಗಾಗಿ ನಡೆಸುವ ಹಣಕಾಸು ತಿಂಗಳ ಶಿಬಿರಗಳಲ್ಲಿ ಏಕರೂಪದ ಪಠ್ಯವಾಗಿ ಬಳಸಬಹುದು.

*****

ಹಣಕಾಸು ಸಾಕ್ಷರತಾ ಶಿಬಿರಗಳ ನಿರ್ವಹಣೆ – ಮಾರ್ಗದರ್ಶಿ ಸೂತ್ರಗಳು

ಹಣಕಾಸು ಸಾಕ್ಷರತಾ ಕೇಂದ್ರ ಮತ್ತು ಗ್ರಾಮೀಣ ಶಾಖೆಗಳು ಹೊರಾಂಗಣದಲ್ಲಿ ಹಣಕಾಸು ಸಾಕ್ಷರತಾ ಶಿಬಿರಗಳನ್ನು ನಡೆಸಲು ಅಗತ್ಯವಾದ ಶಿಬಿರದ ಸ್ಥಳದ ವಾರ್ಷಿಕ ಕ್ಯಾಲೆಂಡರ್‌ನ್ನು ಗೊತ್ತುಮಾಡಿಕೊಳ್ಳಬೇಕು. ಪ್ರತಿಯೊಂದು ಸ್ಥಳದಲ್ಲೂ ಕಾರ್ಯಕ್ರಮವನ್ನು ಮೂರು ಹಂತದಲ್ಲಿ ಮೂರು ತಿಂಗಳವರೆಗೆ ಹರಡಿರುವಂತೆ ನಡೆಸಬೇಕು. ಎರಡು ಗಂಟೆಗಳ ಅವಧಿಯ ಪ್ರತಿ ಮೂರು ತರಗತಿಗಳು ಮತ್ತು ಕಾರ್ಡ್‌ಗಳ ವಿತರಣೆಯ ಸಮರ್ಪಕತೆಯನ್ನು ಮನದಟ್ಟುಮಾಡಿಕೊಳ್ಳಲು ಒಂದು ಭೇಟಿಯು ಜೊತೆಗಿರಬೇಕು. ಸೂಕ್ತವಾದ ಹೊರಾಂಗಣ ಆವರಣ ಮತ್ತು ಸ್ಥಳವನ್ನು ಮುಂಚಿತವಾಗಿಯೇ ಗೊತ್ತುಮಾಡಿ ಸಿದ್ಧಪಡಿಸಿಕೊಂಡಿರಬೇಕು. ನಿರ್ದಿಷ್ಟ ಪ್ರದೇಶ ಮತ್ತು ಲಭ್ಯ ಸಂಪನ್ಮೂಲಗಳನ್ನಾಧರಿಸಿದಂತೆ ರೂಢಿಬದ್ಧವಾದ ಕಾರ್ಯಕ್ರಮವನ್ನು ಬ್ಯಾಂಕುಗಳು ಅಳವಡಿಸಿಕೊಳ್ಳಬೇಕು. ಪ್ರತಿಯೊಂದು ಸಂದರ್ಭದಲ್ಲೂ ಕಾರ್ಯಕ್ರಮ ನಡೆಸುವುದರ ಮುಖ್ಯ ಉದ್ದೇಶ ಅತಿ ಹೆಚ್ಚು ಸಂಖ್ಯೆಯ ಜನರನ್ನು ಬ್ಯಾಂಕಿಂಗ್ ಕ್ಷೇತ್ರದೊಳಗೆ ತರುವುದಾಗಿರಬೇಕು.

ಮೊದಲ ತರಗತಿ

* ಹಣಕಾಸು ಪರಿಕಲ್ಪನೆಗಳ ಬಗ್ಗೆ ತಿಳಿವು, ವೈಯಕ್ತಿಕ ಹಣಕಾಸು ಮತ್ತು ಜನರಿಂದ ಹಣದ ನಿರ್ವಹಣೆ. ಈ ಉದ್ದೇಶಕ್ಕಾಗಿ ಬ್ಯಾಂಕುಗಳು ಹಳ್ಳಿಯ ಜನರ ಗುಂಪುಗಳಿಗಾಗಿ ಶಿಬಿರವನ್ನು ಏರ್ಪಡಿಸಬೇಕು. ಅಂತಹ ಶಿಬಿರಗಳಿಗೆ ಹೆಚ್ಚಿನ ಜನ ಸೇರಿಸುವುದಕ್ಕೆ ಮುಂಚಿತವಾಗಿ ಮಾಹಿತಿಯನ್ನು ಪ್ರಚಾರ ಮಾಡಬೇಕು.
* ಶಿಬಿರಗಳ ಸಂಘಟನೆಯ ಕೆಲಸವನ್ನು ನಡೆಸುವಾಗ ಅದರಲ್ಲಿ ಗ್ರಾಮದ ಸರಪಂಚ್, ಶಾಲಾ ಶಿಕ್ಷಕರು ಅಥವಾ ಹಳ್ಳಿಗರ ವಿಶ್ವಾಸ ಗಳಿಸಿರುವ ಇತರ ವ್ಯಕ್ತಿಗಳು ಭಾಗವಹಿಸುವಂತೆ ಮುಂಚಿತವಾಗಿಯೇ ಸಿದ್ಧತೆ ಮಾಡಿಕೊಳ್ಳಬೇಕು. ಕಾರ್ಯಕ್ರಮವನ್ನು ನಡೆಸಲು ಸೂಕ್ತವಾದ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಶಿಬಿರಾರ್ಥಿಗಳು ಕಾರ್ಯಕ್ರಮಕ್ಕೆ ಬರುವುದಕ್ಕೆ ಮುಂಚೆಯೇ ಎಲ್ಲ ಭಿತ್ತಿ ಪತ್ರಗಳನ್ನು ಅದರ ಜಾಗಗಳಲ್ಲಿ ಇರುವಂತೆ ನೋಡಿಕೊಳ್ಳಬೇಕು.
* ಶಿಬಿರಾರ್ಥಿಗಳ ಹೆಸರು, ವಯಸ್ಸು ಮತ್ತು ಕಸುಬು– ಇವುಗಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕು.
* ಹಣಕಾಸು ಯೋಜನೆ, ಬಜೆಟ್ ತಯಾರಿ, ಉಳಿತಾಯ, ಹಣಕಾಸು ಡೈರಿಯನ್ನು ಹೇಗೆ ಬರೆಯುವುದು, ಬ್ಯಾಂಕುಗಳಲ್ಲಿ ಹಣವನ್ನು ಇಡುವುದರ ಲಾಭಗಳು, ವ್ಯವಹಾರ ಪ್ರತಿನಿಧಿಯ ಪರಿಕಲ್ಪನೆ, ಸಾಲದ ಔಪಚಾರಿಕ ಮತ್ತು ಅನೌಪಚಾರಿಕ ಮೂಲಗಳು, ಸಾಲದ ವೆಚ್ಚ ಮತ್ತು ಉದ್ದೇಶ, ಸಾಲದ ವಿವಿಧ ಬಗೆಗಳು – ಕೈಪಿಡಿಯು ಈ ಎಲ್ಲ ವಿಷಯಗಳನ್ನು ಒಳಗೊಂಡಿರುತ್ತವೆ.
* ಪ್ರತಿ ಶಿಬಿರಾರ್ಥಿಗೂ ಒಂದು ಹಣಕಾಸು ಡೈರಿಯನ್ನು ಹಂಚಬೇಕು. ಬಜೆಟ್ ಸಿದ್ಧಪಡಿಸಲು ಮತ್ತು ನಿಯತವಾಗಿ ಲೆಕ್ಕವನ್ನು ಇಡುವುದಕ್ಕೆ ಹಣಕಾಸು ಡೈರಿಯನ್ನು ಹೇಗೆ ಬಳಸಬೇಕೆಂಬುದನ್ನು ವಿವರಿಸಿ ಹೇಳಬೇಕು. ಡೈರಿ ಬರೆಯುವುದರ ಅನುಕೂಲವನ್ನು ಅವರಿಗೆ ಮತ್ತೆ ಒತ್ತಿ ಹೇಳಿ. ಅವರ ಮನೆಯಲ್ಲಿನ ಬಜೆಟ್ ತಯಾರಿಸಲು, ಆದಾಯ ಮತ್ತು ಖರ್ಚಿನ ಲೆಕ್ಕ ಬರೆದಿಡಲು ಈ ಡೈರಿಯನ್ನು ಉಪಯೋಗಿಸಲು ಹೇಳಿ. ಮುಂದಿನ ತರಗತಿಗೆ ಬಂದಾಗ ಈ ಡೈರಿಯನ್ನು ಮರೆಯದೆ ತರಲು ಹೇಳಿ.
* ಮೊದಲನೇ ತರಗತಿ ಮುಗಿದ ನಂತರ, ಎರಡನೇ ತರಗತಿಯ ಸಮಯ ಮತ್ತು ಸ್ಥಳವನ್ನು ಪ್ರಕಟಿಸಬೇಕು. ಎರಡನೆಯ ತರಗತಿಯಲ್ಲಿ ವ್ಯವಹಾರ ಪ್ರತಿನಿಧಿ (ಬಿ.ಸಿ.) ಯನ್ನು ಹಳ್ಳಿಗರಿಗೆ ಪರಿಚಯಿಸುತ್ತೇವೆಂಬ

ಮಾಹಿತಿಯನ್ನು ಅವರಿಗೆ ತಿಳಿಸಬೇಕು. ಬಿ.ಸಿ.ಗಳ ಮೂಲಕ ಖಾತೆಗಳನ್ನು ತೆರೆಯಲಾಗುವುದು, ಎಂಬ ಮಾಹಿತಿಯನ್ನು ಹಳ್ಳಿಗರಿಗೆ ತಿಳಿಸಬೇಕು. ಬ್ಯಾಂಕ್ ಖಾತೆಯನ್ನು ತೆರೆಯುವಾಗ ಅಗತ್ಯವಾದ ದಾಖಲೆಗಳನ್ನು ಹಳ್ಳಿಗರಿಗೆ ತಿಳಿಸಿಹೇಳಬೇಕು. ಮುಂದಿನ ತರಗತಿಗೆ ಬರುವಾಗ ಈ ಎಲ್ಲ ದಾಖಲೆಗಳನ್ನು ತೆಗೆದುಕೊಂಡು ಬರುವಂತೆ ತಿಳಿಸಬೇಕು. ಎಲ್ಲ ಶಿಬಿರಾರ್ಥಿಗಳು ಮುಂದಿನ ತರಗತಿಗೆ ತಪ್ಪದೆ ಹಾಜರಾಗಬೇಕೆಂಬ ಮಾಹಿತಿಯ ಸಂದೇಶವನ್ನು ತಿಳಿಸಬೇಕು.

* ಗ್ರಾಮ ಪಂಚಾಯತಿ ಅಥವಾ ಶಾಲೆಗಳಲ್ಲಿ ಸೂಕ್ತವಾದ ಜಾಗದಲ್ಲಿ ಎಲ್ಲಾ ಭಿತ್ತಿ ಪತ್ರಗಳನ್ನು ಶಾಶ್ವತವಾಗಿ ಓದಲು ಲಭ್ಯವಿರುವಂತೆ ಅಂಟಿಸಬೇಕು.

ಎರಡನೆಯ ತರಗತಿ (ಮೊದಲ ತರಗತಿಯಾದ ಹದಿನೈದು ದಿನಗಳ ನಂತರ)

* ಹಾಜರಾತಿಯನ್ನು ತೆಗೆದುಕೊಳ್ಳಿ. ಯಾರಾದರೂ ಶಿಬಿರಾರ್ಥಿಗಳು ಗೈರುಹಾಜರಾಗಿದ್ದರೆ, ಅದಕ್ಕೆ ಕಾರಣವನ್ನು ಕೇಳಿ ತಿಳಿದುಕೊಳ್ಳಿ, ವ್ಯವಹಾರ ಪ್ರತಿನಿಧಿ (ಬಿ.ಸಿ.) ಯನ್ನು ಹಳ್ಳಿಗರಿಗೆ ಪರಿಚಯ ಮಾಡಿಕೊಡಿ. ಬಿ.ಸಿ.ಗಳಿಗೂ ಬ್ಯಾಂಕಿಗೂ ಇರುವ ನಂಟು ಏನೆಂಬುದನ್ನು ಅವರಿಗೆ ವಿವರಿಸಿ. ಬಿ.ಸಿ.ಗಳ ಮೂಲಕ ಹಣಕಾಸು ವ್ಯವಹಾರ ಮಾಡುವುದರ ಅನುಕೂಲಗಳನ್ನು ಅವರಿಗೆ ತಿಳಿಸಿಹೇಳಿ. ಬಿ.ಸಿ.ಗಳ ಮೂಲಕ ಸಿಗುವ ಠೇವಣಿ ಮತ್ತು ಜಮೆಯ ಉತ್ಪನ್ನಗಳು ಮತ್ತು ಇತರ ಸೇವೆಗಳ ವಿವರಗಳನ್ನು ತಿಳಿಸಿ.
* ಶಿಬಿರಾರ್ಥಗಳಿಗೆ ಐ.ಸಿ.ಟಿ. (ICT) ಸಾಧನವು ಕಾರ್ಯಗತಗೊಳ್ಳುವ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡಿ. ಅದರ ಪ್ರತಿಯೊಂದು ಅಂಗದ ಕಾರ್ಯಶೈಲಿಯನ್ನು ವಿವರಿಸಿ. ಉದಾಹರಣೆಗೆ, ಹಣ ಜಮೆಯಾದಾಗ / ಹಿಂದೆ ಪಡೆದುಕೊಂಡಾಗ ಏನಾಗುತ್ತದೆ, ಎಂಬುದನ್ನು ವಿವರಿಸಿ.
* ಅವರ ಹಣಕಾಸು ಡೈರಿಯನ್ನು ತಪಾಸಣೆ ಮಾಡಿ ನೋಡಿ. ಅವರಿಗೆ ಡೈರಿಯನ್ನು ಬರೆಯುವುದರಲ್ಲಿ ಏನಾದರೂ ಸಮಸ್ಯೆಗಳಿವೆಯೇ ಎಂಬುದನ್ನು ಕೇಳಿ ತಿಳಿದುಕೊಳ್ಳಿ, ಅಗತ್ಯ ಬಿದ್ದರೆ, ತಿದ್ದುಪಡಿಯಿದ್ದರೆ ಸೂಚಿಸಿ. ಅದನ್ನು ಪ್ರತಿ ತಿಂಗಳು ಕ್ರಮವಾಗಿ ಬರೆಯಬೇಕೆಂದು ಸಲಹೆಕೊಡಿ.
* ಖಾತೆಯ ವಿಶಿಷ್ಟ ಲಕ್ಷಣಗಳು – ತಿಂಗಳಲ್ಲಿ ಎಷ್ಟು ಬಾರಿ ಜಮೆ ಮಾಡಬಹುದು/ ಹಿಂದಕ್ಕೆ ಪಡೆಯಬಹುದು, ಎಂಬ ಮಾಹಿತಿ, ಅದಕ್ಕೆ ತಗಲುವ ಖರ್ಚು, ಸಾಮಾಜಿಕ ಕಲ್ಯಾಣದ ಪಾವತಿಗಳನ್ನು ನೇರವಾಗಿ ಖಾತೆಗೆ ವರ್ಗಾಯಿಸುವ ಕಾರ್ಯವಿಧಾನ, ಇಂತಹ ಖಾತೆಗಳಲ್ಲಿ ಎಷ್ಟು ವಿಧಗಳಲ್ಲಿ ರವಾನೆಯನ್ನು ಮಾಡಬಹುದು ಮತ್ತು ಸ್ವೀಕರಿಸಬಹುದು, ಮುಂತಾದವು.
* ಖಾತೆಗಳನ್ನು ತೆರೆಯಲು ದಾಖಲಾತಿ ಪ್ರಕ್ರಿಯೆಯನ್ನು ಆರಂಭಿಸಿ. ದಾಖಲಾತಿಯ ಕೊನೆಯಲ್ಲಿ, ಅವರಿಗೆ ಸುಮಾರು ಎಷ್ಟು ದಿನಗಳ ಒಳಗೆ ಖಾತೆಯನ್ನು ತೆಗೆಯಬಹುದು ಮತ್ತು ಖಾತೆಯನ್ನು ಯಾವಾಗ ಬಳಸಲು ಕಾರ್ಡ್‌ಗಳನ್ನು ಪಡೆಯುವರು ಎಂಬುದರ ಬಗ್ಗೆ ಸಲಹೆಯನ್ನು ಕೊಡುವುದು. ಕಾರ್ಡ್‌ಗಳನ್ನು ಪಡೆದ ನಂತರ ತಕ್ಷಣದಿಂದಲೇ ಅವರು ತಮ್ಮ ದಿನ ನಿತ್ಯದ ಅಗತ್ಯಗಳಿಗಾಗಿ ಕಾರ್ಡ್‌ಗಳನ್ನು ಬಳಸಲು ಆರಂಭಿಸಬೇಕೆಂದು ಸಲಹೆ ನೀಡಿ.
* **ಎರಡನೆಯ ತರಗತಿಯು ಮುಗಿದ ಹದಿನೈದು ದಿನಗಳ ನಂತರ, ಶಾಖಾ ಅಧಿಕಾರಿಗಳು ಹಳ್ಳಿಗಳಿಗೆ ಭೇಟಿ ನೀಡಿ ಹಳ್ಳಿಗರಿಗೆ ಕಾರ್ಡ್‌ಗಳನ್ನು ಹಂಚಲಾಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು. ಬಿ.ಸಿ.ಗಳು ತಮ್ಮ ಬ್ಯಾಂಕಿಂಗ್ ಕಾರ್ಯಾಚರಣೆಯನ್ನು ಮಾಡುತ್ತಿದ್ದಾರೆಯೇ ಮತ್ತು ಹಳ್ಳಿಗರು ಅದರ ಪ್ರಯೋಜನವನ್ನು ಬಳಸಿಕೊಳ್ಳುತ್ತಿದ್ದಾರೆಯೇ ಎಂಬುದನ್ನು ಇವರು ದೃಢಪಡಿಸಿಕೊಳ್ಳಬೇಕು.**

ಮೂರನೆಯ ತರಗತಿ (ಎರಡನೆಯ ತರಗತಿಯಾದ ಎರಡು ತಿಂಗಳ ನಂತರ)

* ಕಳೆದ ತರಗತಿಯಲ್ಲಿ ಖಾತೆಗಳನ್ನು ತೆರೆಯಲು ತಮ್ಮ ಹೆಸರುಗಳನ್ನು ದಾಖಲಿಸಿದ ಹಳ್ಳಿಗರ ಸಭೆಯೊಂದನ್ನು ಏರ್ಪಡಿಸಬೇಕು. ಬಿ.ಸಿ. ಮತ್ತು ಹಳ್ಳಿಗರೊಂದಿಗೆ ಸಂವಾದವೇರ್ಪಡಿಸಿ.
* ಖಾತೆಗಳನ್ನು ಬಳಸುವಲ್ಲಿ ಅವರಿಗೇನಾದರೂ ಸಮಸ್ಯೆಗಳಿವೆಯೇ ಎಂಬುದನ್ನು ಕೇಳಿ ಮತ್ತು ಐ.ಸಿ.ಟಿ. (ICT) ಆಧಾರಿತ ಬ್ಯಾಂಕ್ ವ್ಯವಸ್ಥೆಯನ್ನು ಉತ್ತಮಪಡಿಸಲು ಏನಾದರೂ ಸಲಹೆಗಳಿದ್ದರೆ ಪಡೆಯಿರಿ.
* ಖಾತೆಗಳ ಬಳಕೆಯಲ್ಲಿ ಉಂಟಾಗಬಹುದಾದ ಅಡೆತಡೆಗಳನ್ನು ಕಂಡುಹಿಡಿಯಲು ಖಾತೆಗಳ ಬಳಕೆಯನ್ನು ವಿಮರ್ಶಿಸಿ.

ನಂತರದ ದಿನಗಳಲ್ಲಿ ಖಾತಾ ವ್ಯವಹಾರಗಳ ವಿವಿಧ ಹಂತಗಳನ್ನು ನಿಯತವಾದ ವರದಿ ವ್ಯವಸ್ಥೆಯ ಮೂಲಕ ಅನುಪಾಲನೆ ಮಾಡಬೇಕು.

****

ನಿಮ್ಮ ಹಣಕಾಸು ವ್ಯವಹಾರವನ್ನು ಸರಿಯಾಗಿ ನಿರ್ವಹಿಸಿ

ಆದಾಯ ಎಂದರೆ ಏನು?

ಸಂಬಳ, ಕೂಲಿ, ಕೃಷಿ ಮತ್ತು ವ್ಯಾಪಾರದ ಮೂಲಕ ಗಳಿಸಿದ ಹಣವೇ ನಮ್ಮ ಆದಾಯ.

ಆದಾಯ (ಹಣದ ಮೂಲಗಳು)	ಮೊಬಲಗು (ರೂ.)
ಸಂಬಳ ಅಥವಾ ಕೂಲಿ	2000
ಕೃಷಿ / ವ್ಯಾಪಾರದಿಂದ ಗಳಿಕೆಯ ಹಣ	3000
ಒಟ್ಟು ಮೊತ್ತ	**5000**

ಖರ್ಚು ಎಂದರೆ ಏನು?

ಹಲವಾರು ಬಾಬತ್ತುಗಳಿಗೆ ನಾವು ಬಳಸುವ ಹಣವೇ ಖರ್ಚು. ಜೀವನಾವಶ್ಯಕ ವಸ್ತುಗಳಿಗೆ ಮತ್ತು ತೀರಾ ಅನಾವಶ್ಯಕ ವಸ್ತುಗಳಿಗೆ ಬಳಸುವ ಹಣವು ಇದರಲ್ಲಿ ಒಳಗೊಂಡಿರುತ್ತದೆ. ನಮ್ಮ ಖರ್ಚುಗಳನ್ನು ನಾವು ಅರ್ಥ ಮಾಡಿಕೊಳ್ಳೋಣ.

ಖರ್ಚು (ಹಣದ ಬಳಕೆ)	ಮೊಬಲಗು (ರೂ.)
ಆಹಾರ, ವಸತಿ, ಉಡುಪು	2000
ಶಿಕ್ಷಣ	1000
ಸಾಲದ ಮರುಪಾವತಿ	700
ಕಾಯಿಲೆ	300
ಕುಡಿತ, ಮಾದಕವಸ್ತು, ಗುಟ್ಕ	500
ಜೂಜು	400
ವಿವಾಹ, ಹಬ್ಬ, ತೀರ್ಥಯಾತ್ರೆ ಮುಂತಾದ ಘಟನೆಗಳಿಗೆ ಅಧಿಕ ಖರ್ಚು	1100
ಒಟ್ಟು ಮೊತ್ತ	**6000**

ಹೂಡಿಕೆಯೆಂದರೆ ಏನು?

ಮುಂದಿನ ದಿನಗಳಲ್ಲಿ ಹೆಚ್ಚು ಹಣವನ್ನು ಗಳಿಸಬಹುದೆಂಬ ನಿರೀಕ್ಷೆಯಲ್ಲಿ ನಮ್ಮ ಉಳಿತಾಯದ ಹಣವನ್ನು ವಿನಿಯೋಗಿಸುವುದು ಹೂಡಿಕೆಯೆಂದೆನಿಸಿಕೊಳ್ಳುತ್ತದೆ. ಉದಾಹರಣೆಗೆ ನಿವೇಶನವನ್ನು ಕೊಂಡುಕೊಳ್ಳುವುದು, ಬ್ಯಾಂಕಿನಲ್ಲಿ ಸ್ಥಿರ ಠೇವಣಿಗಳಲ್ಲಿ ಹಣ ಇಡುವುದು, ಇತ್ಯಾದಿ.

ಉಳಿತಾಯ ಎಂದರೆ ಏನು?

ಮಾಡುವ ಖರ್ಚಿಗಿಂತ ಬರುವ ಆದಾಯ ಹೆಚ್ಚಿದ್ದರೆ ಆಗ ಉಳಿಯುವ ಹೆಚ್ಚುವರಿ ಹಣವನ್ನು 'ಉಳಿತಾಯ' ಎನ್ನಲಾಗುವುದು.

ಸಾಲ ಎಂದರೆ ಏನು?

ಬರುವ ಆದಾಯಕ್ಕಿಂತ ಮಾಡುವ ಖರ್ಚು ಹೆಚ್ಚಿದ್ದರೆ ಆಗ ನಮ್ಮಲ್ಲಿ 'ಉಳಿತಾಯ'ವು ಇಲ್ಲದಿದ್ದಲ್ಲಿ ಆಗ ಹಣದ ಕೊರತೆಯುಂಟಾಗುತ್ತದೆ. ಅದನ್ನು ತುಂಬಲು ನಾವು ಬೇರೆಯವರಿಂದ ಕಡ ತರಬೇಕಾಗುತ್ತದೆ . ಅದೇ ಸಾಲ.

ಆದಾಯ	ಖರ್ಚು	ಫಲಶ್ರುತಿ	ಕ್ರಿಯೆ
5000	4000	1000 ಹೆಚ್ಚುವರಿ	ಮುನ್ನಡೆ
5000	5000	ಮಿಗುತಾಯ ಇಲ್ಲ ಕೊರತೆಯೂ ಇಲ್ಲ	ಯೋಚಿಸು
5000	6000	1000 ಕೊರತೆ	ನಿಲ್ಲು



ಸಾಲವನ್ನು ನಿರ್ವಹಿಸುವುದು ಹೇಗೆ?

ನಿರ್ದಿಷ್ಟ ತಿಂಗಳಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಿದ್ದರೆ, ಅದರ ಹಿಂದಿನ ತಿಂಗಳ ಉಳಿತಾಯವನ್ನು ಈ ತಿಂಗಳ ಕೊರತೆಯನ್ನು ನೀಗಿಸಲು ಬಳಸಬಹುದು. ಆದರೆ ನಮಗೆ ಉಳಿತಾಯವೇ ಇಲ್ಲದಿದ್ದರೆ, ಆಗ ನಾವು ಕಡ ತರಬೇಕಾಗುತ್ತದೆ ಮತ್ತು ಈ ಸಾಲವು ಅತಿ ದುಬಾರಿಯಾದುದಾಗಿರುತ್ತದೆ.

ನಮ್ಮ ದಿನನಿತ್ಯದ ಜೀವನದಲ್ಲಿ ನೀರಿನ ಬಳಕೆಯನ್ನು ನಾವು ಹೇಗೆ ನಿರ್ವಹಿಸುತ್ತೇವೋ ಇದೂ ಅದೇ ರೀತಿಯಲ್ಲಿರುತ್ತದೆ. ಕೆಲವೊಮ್ಮೆ ಮುನಿಸಿಪಾಲಿಟಿಯ ನಲ್ಲಿಯಲ್ಲಿ ನೀರು ಇಡೀ ದಿನ ಬಂದರೆ, ಕೆಲವೊಮ್ಮೆ ಬರುವುದೇ ಇಲ್ಲ. ಹಾಗೆಂದು ನಾವು ನೀರನ್ನು ಬಳಸುವುದನ್ನು ನಿಲ್ಲಿಸಲಾದೀತೇ? ಇಲ್ಲ. ನಾವು ನೀರನ್ನು ಬಳಸುವುದನ್ನು ನಿಲ್ಲಿಸಲಾಗುವುದಿಲ್ಲ. ನೀರು ಹೇರಳವಾಗಿ ದೊರೆಯುವಾಗ ಅದನ್ನು ಸಂರಕ್ಷಿಸಿಕೊಂಡು, ನೀರಿನ ಕೊರತೆ ಬಿದ್ದಾಗ ಅದನ್ನು ಬಳಸಿಕೊಳ್ಳುತ್ತೇವೆ. ಈ ಕ್ರಿಯೆಯನ್ನೇ ನಾವು ಉಳಿತಾಯ ಎನ್ನುತ್ತೇವೆ. ನಮ್ಮ ಹಣಕಾಸು ವ್ಯವಸ್ಥೆಯು ತಳದಲ್ಲಿ ನಲ್ಲಿಯಿರುವ ಒಂದು ಹೂಜಿಯಂತೆ. ಈ ಹೂಜಿಗೆ ಹರಿದು ಬರುವ ನೀರು ನಮ್ಮ ಆದಾಯ. ಹೂಜಿಯಿಂದ ಹೊರಗೆ ಹೋಗುವ ನೀರು ನಮ್ಮ ಖರ್ಚು.

ಅವಶ್ಯಕವಲ್ಲದ ಖರ್ಚುಗಳನ್ನು ಕಿತ್ತುಹಾಕಿ ಮತ್ತು ನಿಮ್ಮ ಉಳಿತಾಯವನ್ನು ಹೆಚ್ಚಿಸಿ.

ಅವಶ್ಯಕ ಮತ್ತು ಅನವಶ್ಯಕ ಖರ್ಚುಗಳ ನಡುವಿನ ವ್ಯತ್ಯಾಸವೇನು?

ಅವಶ್ಯಕ ಖರ್ಚುಗಳೆಂದರೆ ಮೂಲಭೂತ ಅಗತ್ಯಗಳಿಗಾಗಿ ವ್ಯಯಿಸುವ ಹಣ. ಆದ್ದರಿಂದ ಆಹಾರ, ವಸತಿ, ಉಡುಪು, ಮಕ್ಕಳ ಶಿಕ್ಷಣ, ಆರೋಗ್ಯ ಇತ್ಯಾದಿ ಬಾಬ್ತಿಗಾಗಿ ಖರ್ಚು ಮಾಡುವ ಹಣವನ್ನು ತಪ್ಪಿಸುವುದಕ್ಕಾಗುವುದಿಲ್ಲ. ಮೂಲಭೂತ ಅಗತ್ಯಗಳಲ್ಲದ ಖರ್ಚಿನ ಕೆಲವು ಬಾಬತ್ತುಗಳು ನಮ್ಮ ಬಯಕೆಗಳಾಗಿರುತ್ತವೆ. ನಮ್ಮ ಖುಷಿಗಾಗಿ ಈ ವಸ್ತುಗಳು ನಮಗೆ ಬೇಕಾಗಿರುತ್ತವೆಯೇ ಹೊರತು ಅವು ನಮ್ಮ ಬದುಕಿನ ಅಗತ್ಯಗಳಲ್ಲ.

ನಮ್ಮ ಹಣವನ್ನು ನಾವು ಹೇಗೆ ನಿರ್ವಹಿಸಬೇಕು?

ಹಣಕಾಸು ಯೋಜನೆಯನ್ನು ಮಾಡಿದರೆ ನಮ್ಮ ಹಣವನ್ನು ನಾವು ಪರಿಣಾಮಕಾರಿಯಾಗಿ ನಿರ್ವಹಿಸಬಹುದು. ಹಣಕಾಸು ಯೋಜನೆಯ ಮೊದಲ ಹಂತವೆಂದರೆ, ನಾವು ಒಂದು ಹಣಕಾಸು ದಿನಚರಿಯನ್ನು ಇಟ್ಟುಕೊಳ್ಳಬೇಕು. ಅದರಲ್ಲಿ ವಾರಕ್ಕೆ ಅಥವಾ ತಿಂಗಳಿಗೊಮ್ಮೆ ನಮ್ಮ ಆದಾಯ ಮತ್ತು ಖರ್ಚಿನ ಲೆಕ್ಕಾಚಾರವನ್ನು ಬರೆದಿಡಬೇಕು.

ಹಣಕಾಸು ಯೋಜನೆ ಎಂದರೇನು?

ಮಗುವಿನ ಜನನ, ಶಿಕ್ಷಣ, ಮನೆಯ ಖರೀದಿ, ಮದುವೆ, ಬಿತ್ತನೆಯ ಬೀಜದ ಖರೀದಿ, ಇತ್ಯಾದಿ ಖರ್ಚುಗಳು ಅಥವಾ ಕಾಯಿಲೆ, ಅಪಘಾತ, ಸಾವು, ಪ್ರವಾಹ ಮತ್ತು ಪ್ರಕೃತಿ ವಿಕೋಪದಂತಹ ಆಪತ್ಕಾಲೀನ ಸಂದರ್ಭಗಳು – ಹೀಗೆ ನಮ್ಮ ಇಡೀ ಜೀವನದ ಸಂದರ್ಭದಲ್ಲಿ ಉಂಟಾಗಬಹುದಾದ ಹಣಕಾಸಿನ ಅಗತ್ಯಗಳನ್ನು ಅಂದಾಜು ಮಾಡಿ ಅದಕ್ಕಾಗಿ ಹಣಕಾಸು ವ್ಯವಸ್ಥೆಯನ್ನು ಮಾಡಿಕೊಳ್ಳುವುದು.

ನಾವು ಹಣಕಾಸು ಯೋಜನೆಯನ್ನು ಏಕೆ ಮಾಡಬೇಕು?



ನಮ್ಮ ಆದಾಯದ ಮೊತ್ತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಬರಬಹುದಾದ ಖರ್ಚು ವೆಚ್ಚಗಳನ್ನು ಮುಂಚಿತವಾಗಿಯೇ ಯೋಜಿಸುವುದರಿಂದ ಎರಡು ಪ್ರಯೋಜನಗಳಿವೆ: ಮೊದಲನೆಯದು, ನಮ್ಮ ಭವಿಷ್ಯದ ಅಗತ್ಯಗಳನ್ನು ಪೂರೈಸಲು ನಮ್ಮ ಆದಾಯದ ಒಂದು ಭಾಗವನ್ನು ನಿಯತವಾಗಿ ಉಳಿತಾಯ ಮಾಡುವುದು ಮತ್ತು ಎರಡನೆಯದು ನಮ್ಮ ಭವಿಷ್ಯದ ಅಗತ್ಯಗಳನ್ನು ಪೂರೈಸಲು ಜೀವನಾವಶ್ಯಕವಲ್ಲದ ಬಾಬ್ತುಗಳಿಗಾಗಿ ಮಾಡುವ ಖರ್ಚನ್ನು ಕಡಿತ ಮಾಡುವುದು. ಆದ್ದರಿಂದ ನಾವು ಇಂದಿನಿಂದಲೇ ಹಣಕಾಸು ಯೋಜನೆಯನ್ನು ಆರಂಭಿಸಿದರೆ ನಮ್ಮ ಸಾಲದ ಹೊರೆಯನ್ನು ಕಡಿಮೆಗೊಳಿಸಿ ಉಳಿತಾಯವನ್ನು ಹೆಚ್ಚಿಸಿ ಕೊಂಡು ಮನೆಯನ್ನು ಕೊಂಡುಕೊಳ್ಳಬಹುದು ಅಥವಾ ನಮ್ಮ ಹಣದಿಂದಲೇ ಉನ್ನತ ಶಿಕ್ಷಣಕ್ಕೆ ಹಣ ಪೂರೈಸಬಹುದು. **ಹಣಕಾಸು ಯೋಜನೆಯಿಂದ ನಿಮ್ಮ ಗುರಿಯನ್ನು ಸಾಧಿಸಬಹುದು.**

ಹಣಕಾಸು ಯೋಜನೆಯನ್ನು ಮಾಡುವುದು ಹೇಗೆ?

* ಈಗಿನ ಹಣಕಾಸು ಪರಿಸ್ಥಿತಿಯನ್ನು ಅಂದಾಜು ಮಾಡಿ (ಇಂದು ನಮ್ಮ ಸ್ಥಾನ / ಮಟ್ಟ ಎಲ್ಲಿದೆ?)
* ನಮ್ಮ ಹಣಕಾಸು ಅಗತ್ಯಗಳನ್ನು ಗುರುತಿಸಿಕೊಳ್ಳಿ. [ಅಲ್ಪ ಕಾಲಾವಧಿಯಲ್ಲಿ (1 ವರ್ಷ) ಮಧ್ಯಮ ಅವಧಿ (1–5 ವರ್ಷ) ಮತ್ತು ದೀರ್ಘಾವಧಿ (5 ವರ್ಷಕ್ಕಿಂತ ಹೆಚ್ಚು) ಯಲ್ಲಿ ನಾವೇನು ಸಾಧಿಸಬಹುದು?]
* ನಾವು ಸಾಧಿಸಬೇಕೆಂದಿರುವ ಪ್ರತಿಯೊಂದು ಬಾಬ್ತಿನ ಬೆಲೆ ಮತ್ತು ಗುರಿ ಮುಟ್ಟಬೇಕಾದ ಅವಧಿಯನ್ನು ಅಂದಾಜು ಮಾಡಿ. ಪ್ರತಿ ವಾರ/ ತಿಂಗಳಿನಲ್ಲಿ ನಾವು ಎಷ್ಟು ಉಳಿತಾಯ ಮಾಡಬೇಕೆಂಬುದನ್ನು ಲೆಕ್ಕ ಹಾಕಿ.
* ಹಣಕಾಸು ಡೈರಿಯನ್ನು ಇಡುವುದನ್ನು ಅಭ್ಯಾಸ ಮಾಡಿಕೊಳ್ಳಿ – ವಾರದ/ತಿಂಗಳ ಆದಾಯ ಮತ್ತು ಖರ್ಚನ್ನು ಬರೆದಿಡಿ.
* ಖರ್ಚನ್ನು ಕಡಿತ ಮಾಡಿ. ವಿವೇಚನೆಯಿಂದ ಖರ್ಚು ಮಾಡಿ.

* ಉಳಿತಾಯವನ್ನು ನಿಯತವಾಗಿ ಪುನರ್ವಿಮರ್ಶಿಸಿ– ಅದು ನಿಮ್ಮ ಯೋಜನೆಯಂತಿದೆಯೇ? ಇಲ್ಲದಿದ್ದರೆ, ಖರ್ಚು ಕಡಿಮೆ ಮಾಡಿ, ಉಳಿತಾಯ ಹೆಚ್ಚಿಸಲು ಅವಕಾಶಗಳಿರುವಂತಹ ಕ್ಷೇತ್ರಗಳತ್ತ ದೃಷ್ಟಿಹರಿಸಿ.
* ವಾರದ ಅಥವಾ ತಿಂಗಳ ಕೊನೆಯಲ್ಲಿ ಎಷ್ಟು ಹಣ ಉಳಿತಾಯವಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಿ.
* ಬ್ಯಾಂಕ್ ಖಾತೆಯಲ್ಲಿ ನಿಮ್ಮ ಉಳಿತಾಯವನ್ನು ಜಮಾ ಮಾಡಿ.

ಹಣಕಾಸು ಡೈರಿಯನ್ನು ಏಕೆ ಇಡಬೇಕು?

ಹಣಕಾಸು ಯೋಜನೆಯನ್ನು ಮಾಡಲು ಹಣಕಾಸು ದಿನಚರಿ ನೆರವಾಗುತ್ತದೆ. ಇದರಿಂದ ನಿರ್ದಿಷ್ಟ ತಿಂಗಳಿನಲ್ಲಿ ಅವಶ್ಯಕ ಮತ್ತು ಅನವಶ್ಯಕ ವಸ್ತುಗಳಿಗೆ ಎಷ್ಟು ಹಣ ಖರ್ಚಾಗಿದೆ, ಎಂಬುದು ನಮಗೆ ಗೊತ್ತಾಗುತ್ತದೆ. ಯಾವ ಖರ್ಚುಗಳನ್ನು ನಾವು ತಡೆಯಬಹುದು ಅಥವಾ ಕಡಿಮೆ ಮಾಡಬಹುದು, ಎಂದು ಗುರುತಿಸಿಕೊಳ್ಳಲು ಇದು ನೆರವಾಗುತ್ತದೆ. ಒಮ್ಮೆ ಇದು ನಮಗೆ ತಿಳಿದ ಮೇಲೆ, ಈ ಖರ್ಚುಗಳನ್ನು ನಾವು ನಿಯಂತ್ರಿಸಬಹುದು. ನಾವು ಈ ಹಣವನ್ನು ಉಳಿಸಿ ಬಡತನದ ಚಕ್ರವನ್ನು ಮುರಿಯಬಹುದು.

ಯಾವಾಗಲೂ ಖರ್ಚು ಮಾಡುವುದಕ್ಕೆ ಮುನ್ನ ಎರಡು ಬಾರಿ ಯೋಚಿಸಿ.

ಉದಾಹರಣೆಗೆ ನಮ್ಮ ತಿಂಗಳ ಆದಾಯವು 5000 ರೂಪಾಯಿಗಳು ಇದೆಯೆಂದಿಟ್ಟುಕೊಳ್ಳೋಣ. ನಾವು ಹಣಕಾಸು ದಿನಚರಿಯನ್ನು ನಿರ್ವಹಣೆ ಮಾಡುವುದರಿಂದ ನಮ್ಮ ಖರ್ಚಿನ ವಿವರಗಳು ಗೊತ್ತಾಗುತ್ತವೆ: ಆಹಾರ, ವಸತಿ ಮತ್ತು ಉಡುಪು (2000), ಮಕ್ಕಳ ಶಿಕ್ಷಣ (1000), ಬಾಡಿಗೆ (700)ಮತ್ತು ಖಾಯಿಲೆ(300) ಮತ್ತು ಹಬ್ಬ, ತೀರ್ಥಯಾತ್ರೆಗಳಂಥ ಬೇಕುಗಳಿಗಾಗಿ (500) ಮತ್ತು ಕುಡಿತ, ಜೂಜಿನ ಖರ್ಚು (500). ಇದರಲ್ಲಿ ಹಬ್ಬ, ಹರಿದಿನ, ತೀರ್ಥಯಾತ್ರೆಯ ಖರ್ಚುಗಳನ್ನು 500ರಿಂದ 200ರೂಗಳವರೆಗೆ ಕಡಿತಗೊಳಿಸಬಹುದು. ಕುಡಿತ, ಜೂಜಿಗೆ ಖರ್ಚು ಮಾಡುವ 500ರೂಗಳನ್ನು ತಪ್ಪಿಸಬಹುದು. ಇದರಿಂದ ಹೆಚ್ಚಾದ 800 ರೂ.ಗಳನ್ನು ಉಳಿತಾಯ ಮಾಡಬಹುದು. ಹೀಗೆ ಹಣಕಾಸು ದಿನಚರಿಯ ಲೆಕ್ಕ ನಿರ್ವಹಣೆ ಮಾಡುವುದರಿಂದ ನಾವು ಹಣವನ್ನು ಉಳಿಸಿದಂತಾಯಿತು. ಈ ರೀತಿ ಹಣಕಾಸು ದಿನಚರಿಯಿಲ್ಲದಿದ್ದರೆ, ನಮ್ಮ ಕೈಯಲ್ಲಿದ್ದ ಹಣವನ್ನು ನಾವು ಸುಮ್ಮನೆ ಖರ್ಚು ಮಾಡಿಬಿಡುತ್ತಿದ್ದೆವು.

ನಾವು ಖರ್ಚು ಕಡಿಮೆ ಮಾಡುವುದು ಹೇಗೆ?

ನಾವು ವಿವೇಚನೆಯಿಂದ ಹಣವನ್ನು ಖರ್ಚು ಮಾಡಿದರೆ, ಕೆಲವೊಂದು ಹೆಚ್ಚಿನ ಖರ್ಚುಗಳನ್ನು ಕಡಿತ ಮಾಡಬಹುದು. ಹೀಗೆ ಉಳಿಸಿದ ಹಣವು ನಮ್ಮ ಹೆಚ್ಚಿನ ಆದಾಯವಾಗಿ ಯಾವುದೇ ಹೆಚ್ಚಿನ ಗಳಿಕೆ ಮಾಡದಿದ್ದರೂ ಜೀವನಾವಶ್ಯಕ ವಸ್ತುಗಳಿಗೆ ಖರ್ಚು ಮಾಡಲು ದೊರೆಯುತ್ತದೆ. ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.



ಉದಾಹರಣೆಗೆ, ನಾವು ಪ್ರತಿದಿನ 4 ಬಟ್ಟಲು ಚಹ ಕುಡಿಯುವವರಾದರೆ, ಕಳೆದ 30 ದಿನಗಳಲ್ಲಿ (ಒಂದು ತಿಂಗಳು) ನಾವು ಸುಮಾರು 120 ಬಟ್ಟಲು ಚಹ ಕುಡಿದಿರುತ್ತೇವೆ. ಪ್ರತಿಯೊಂದು ಬಟ್ಟಲು ಚಹಕ್ಕೆ ರೂ. 5 ಖರ್ಚಾಗುತ್ತದೆ. ಅಂದರೆ ಅದರ ಒಟ್ಟು ಖರ್ಚು ರೂ. 600. ಹಾಗೆ ನಿಧಾನವಾಗಿ ಒಮ್ಮೆ ಯೋಚಿಸಿ, ದಿನದಲ್ಲಿ 4 ಬಟ್ಟಲು ಚಹದ ಅಗತ್ಯವಿದೆಯೇ? ನಾವೇನಾದರೂ ದಿನಕ್ಕೆ 2 ಬಟ್ಟಲು ಚಹ ಕುಡಿಯುವುದಷ್ಟಕ್ಕೇ ಮಿತಗೊಳಿಸಿಕೊಂಡರೆ ಆಗ ಕೇವಲ ರೂ. 300ಗಳಷ್ಟೇ ಖರ್ಚಾಗುತ್ತದೆ ಮತ್ತು ರೂ. 300ಗಳಷ್ಟು ಹಣ ಉಳಿತಾಯ ಮಾಡಿದಂತಾಗುತ್ತದೆ. ಇಲ್ಲಿ 4 ಬಟ್ಟಲು ಚಹ ನಮಗೆ ಬೇಕೆನಿಸುತ್ತದೆ, ಆದರೆ 2 ಬಟ್ಟಲು ಚಹ ನಮ್ಮ ಅಗತ್ಯಕ್ಕೆ ಸಾಕೆನಿಸುತ್ತದೆ. ಅಂದರೆ, ನಮ್ಮ ತಿಂಗಳ ಗಳಿಕೆ ರೂ. 300 ಗಳಷ್ಟು ಹೆಚ್ಚಾಗುತ್ತದೆ. ಅದು ವರ್ಷಕ್ಕೆ ರೂ. 3600ಗಳು ಉಳಿತಾಯವಾಗುತ್ತದೆ.

ಹಣದ ಉಳಿಕೆಯೇ ಹಣದ ಗಳಿಕೆ.

***

ಉಳಿತಾಯ

ನಾವು ಏಕೆ ಉಳಿತಾಯ ಮಾಡಬೇಕು?

ನಾವು ನಿಯತವಾಗಿ ಹಣ ಉಳಿತಾಯ ಮಾಡಬೇಕು. ನಮ್ಮ ಖರ್ಚು ನಮ್ಮ ಆದಾಯಕ್ಕಿಂತ ಹೆಚ್ಚಾದಾಗ ಮತ್ತು ನಮಗೆ ಹೆಚ್ಚಿನ ಹಣದ ಅಗತ್ಯ ಬಿದ್ದಾಗ ಈ ಉಳಿತಾಯದ ಹಣವನ್ನು ಬಳಸಿಕೊಳ್ಳಬಹುದು.

* ಹೆರಿಗೆ, ಶಿಕ್ಷಣ, ಮದುವೆ, ಬಿತ್ತನೆಯ ಬೀಜಗಳ ಖರೀದಿ, ಸ್ವಂತ ಮನೆ ಖರೀದಿ, ಇತ್ಯಾದಿ.
* ಕಾಯಿಲೆ, ಅಪಘಾತ, ಸಾವು, ಪ್ರಕೃತಿ ವಿಕೋಪದಂತಹ ಅನಿರೀಕ್ಷಿತ ಘಟನೆಗಳು ಸಂಭವಿಸಿದಾಗ ಉಂಟಾಗುವ ಖರ್ಚನ್ನು ಭರಿಸಲು ಉಳಿತಾಯದ ಹಣ ಉಪಯೋಗವಾಗುತ್ತದೆ. ಆಪತ್ಕಾಲೀನ ಸಂದರ್ಭಗಳಲ್ಲಿ ಉಳಿತಾಯವು ನೆರವಿಗೆ ಒದಗಿ ಬರುತ್ತದೆ.



* ಕೆಲಸವಿಲ್ಲದ ಖಾಲಿ ಸಮಯದಲ್ಲಿ ಗಳಿಕೆಯ ಅವಕಾಶವಿಲ್ಲದಾಗ ಹಣದ ಅಗತ್ಯವಿರುತ್ತದೆ.
* ನಮ್ಮ ವೃದ್ಧಾಪ್ಯದ ದಿನಗಳಲ್ಲಿ ಹಣದ ಅಗತ್ಯವಿರುತ್ತದೆ.
* ನಮ್ಮ ಮಾಮೂಲಿ ಆದಾಯದಲ್ಲಿ ಕೊಳ್ಳಲಾಗದ್ದನ್ನು ಪಡೆಯಲು ಹಣದ ಅಗತ್ಯವಿದೆ.

ಒಟ್ಟಿನಲ್ಲಿ, ನಮ್ಮಲ್ಲಿ ಸಾಕಷ್ಟು ಉಳಿತಾಯದ ಹಣವಿದ್ದರೆ, ನಮ್ಮ ಗಳಿಕೆಗಿಂತ ಹೆಚ್ಚಿನ ಖರ್ಚು ಒದಗಿ ಬಂದಾಗ ನಮ್ಮದೇ ಉಳಿತಾಯದ ಹಣದಿಂದ ಆ ಖರ್ಚುಗಳನ್ನು ಭರಿಸಬಹುದು.

ಉಳಿತಾಯ ಮಾಡುವುದು ಹೇಗೆ?

ಖರ್ಚುಗಳನ್ನು ಕಡಿತ ಮಾಡುವುದರಿಂದ ಅಥವಾ ಆದಾಯವನ್ನು ಹೆಚ್ಚಿಸುವುದರಿಂದ ನಾವು ಉಳಿತಾಯ ಮಾಡಬಹುದು. ಆದಾಯವು ಅದೇ ಪ್ರಮಾಣದಲ್ಲಿದೆಯೆಂದು ಭಾವಿಸಿಕೊಂಡು, ನಾವು ಕೊಳ್ಳುವಾಗ ಜೀವನಾವಶ್ಯಕ ಮತ್ತು ಜೀವನಾವಶ್ಯಕವಲ್ಲದ ವಸ್ತುಗಳನ್ನು ಕೊಳ್ಳುತ್ತೇವೆ. ಅಗತ್ಯ ವಸ್ತುಗಳು ಎಂದರೆ, ಆಹಾರ, ಉಡುಪು, ಮನೆ ರಿಪೇರಿ, ಬಿತ್ತನೆ ಬೀಜಗಳು, ಕೃಷಿ ಸಾಧನಗಳು, ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ಮುಂತಾದ ಜೀವನಾವಶ್ಯಕ ವಸ್ತುಗಳು. ಈ ವಸ್ತುಗಳು ನಮ್ಮ ದಿನ ನಿತ್ಯದ ಬದುಕಿನ ನಿರ್ವಹಣೆಗೆ ಅಗತ್ಯವಾದದ್ದು. ಅಗತ್ಯವಲ್ಲದ ವಸ್ತುಗಳು

ಎಂದರೆ ಬದುಕಿನಲ್ಲಿ ಹೆಚ್ಚುವರಿಯಾಗಿರುವಂತಹುದು. ನಮ್ಮ ಸಂತೋಷವನ್ನು ಹೆಚ್ಚಿಸುವುದಕ್ಕಾಗಿ ಅವು ನಮಗೆ ಬೇಕು. ಅಂತಹ ಖರ್ಚುಗಳನ್ನು ನಾವು ತಪ್ಪಿಸಬಹುದು ಅಥವಾ ಕಡಿತ ಮಾಡಬಹುದು ಇಲ್ಲವೆ ಮುಂದೂಡಬಹುದು. ಉದಾಹರಣೆಗೆ, ಕುಡಿತ, ಮಾದಕವಸ್ತುಗಳು, ಗುಟ್ಕಾ, ಜೂಜು ಇತ್ಯಾದಿಗಳನ್ನು ತಪ್ಪಿಸಬಹುದು. ಮದುವೆ, ಹಬ್ಬ, ತೀರ್ಥಯಾತ್ರೆಗೆ ಖರ್ಚು ಮಾಡುವ ಹಣವನ್ನು ಕಡಿಮೆ ಮಾಡಬಹುದು. ಟಿ.ವಿ, ಕಾರು, ಆಭರಣಗಳಿಗಾಗಿ ಮಾಡುವ ಖರ್ಚನ್ನು ಮುಂದೂಡಬಹುದು. ಅಗತ್ಯವಲ್ಲದ ವಸ್ತುಗಳಿಗಾಗಿ ನಾವು ಕಡಿಮೆ ಖರ್ಚು ಮಾಡಿದಷ್ಟು, ಅಗತ್ಯ ವಸ್ತುಗಳನ್ನು ಕೊಳ್ಳಲು ಹೆಚ್ಚು ಹಣ ಉಳಿಯುತ್ತದೆ.

ನಮಗೆ ದಿನನಿತ್ಯದ ಮಾಮೂಲಿ ಖರ್ಚುಗಳನ್ನು ಭರಿಸಲು ಸಾಕಷ್ಟು ಹಣವಿಲ್ಲದಿರುವಾಗ ಉಳಿತಾಯ ಮಾಡುವುದಾದರೂ ಹೇಗೆ?

ನಾವು ಉಳಿತಾಯ ಮಾಡುವಷ್ಟು ಹಣವನ್ನು ಗಳಿಸುತ್ತಿಲ್ಲ ಎಂಬ ಕಾರಣದಿಂದ ಉಳಿತಾಯ ಮಾಡುವುದರಿಂದ ಸಾಮಾನ್ಯವಾಗಿ ವಿಮುಖರಾಗುತ್ತೇವೆ. ಆದರೆ ಸತ್ಯ ಸಂಗತಿಯೆಂದರೆ ಪ್ರತಿಯೊಬ್ಬರಿಗೂ ಉಳಿತಾಯ ಮಾಡಲು ಸಾಧ್ಯವಿದೆ ಮತ್ತು ಉಳಿತಾಯದ ಅಗತ್ಯವಿದೆ. ನಾವು ದುಡಿಯಲು ಆರಂಭಿಸಿದ ಮೊದಲ ದಿನದಿಂದಲೇ ಗಳಿಕೆಯ ಒಂದು ಭಾಗವನ್ನು ಪಕ್ಕದಲ್ಲಿಡಬೇಕು. ಬದುಕಿನಲ್ಲಿ ಮೊದಲಿನಿಂದಲೇ ಮೊತ್ತ ಸಣ್ಣದಾದರೂ ಕ್ರಮಬದ್ಧವಾಗಿ ಉಳಿತಾಯ ಮಾಡುವುದನ್ನು ಪ್ರಯತ್ನಿಸಬೇಕು ಮತ್ತು ಅನಿರೀಕ್ಷಿತವಾಗಿ ನಮಗೆ ಯಾವುದಾದರೂ ಲಾಭ / ಗಳಿಕೆ ಸಿಕ್ಕಿದರೆ, ಅದನ್ನು ಪೂರ್ಣವಾಗಿ ಅಥವಾ ಹೆಚ್ಚು ಭಾಗ ಉಳಿಸಬೇಕು. ಅದು ನಮ್ಮ ಮುಂದಿನ ಹಣಕಾಸಿನ ತಾಪತ್ರಯಗಳನ್ನು ಕಡಿಮೆ ಮಾಡುತ್ತದೆ ಮತ್ತು ಅನಿರೀಕ್ಷಿತ ಖರ್ಚುಗಳನ್ನು ನಿವಾರಿಸಲು ನೆರವಾಗುತ್ತದೆ.

ನಾವು 100 ಸಂಪಾದಿಸಿದರೆ, 20 ಉಳಿಸಬಹುದು. ನಾವು 10 ಸಂಪಾದಿಸಿದರೆ, 2 ಉಳಿಸಬಹುದು. ನಾವು ಸಂಪಾದಿಸಿದ 100ರಲ್ಲಿ 20ನ್ನು ಪಕ್ಕಕ್ಕೆ ತೆಗೆದಿಟ್ಟರೆ, 5 ದುಡಿಮೆಯ ದಿನಗಳಲ್ಲಿ ಒಂದು ದಿನದ ಗಳಿಕೆಯನ್ನು ಉಳಿಸಿದಂತಾಗುತ್ತದೆ. 100 ದುಡಿಮೆಯ ದಿನಗಳಲ್ಲಿ ಉಳಿಸಿದ ಮೊತ್ತವು 20 ದುಡಿಮೆಯ ದಿನಗಳ ಗಳಿಕೆ ಮತ್ತು ಅದರ ಮೇಲಿನ ಬಡ್ಡಿಗೆ ಸಮನಾಗಿರುತ್ತದೆ. ಇದು ಸೋಜಿಗವಲ್ಲವೆ!!!!

ದಿನದ ಆದಾಯ	ರೂ. 100
ಪ್ರತಿ ದಿನದ ವೆಚ್ಚ	ರೂ. 80
ಪ್ರತಿ ದಿನದ ಉಳಿತಾಯ	ರೂ. 20
ಒಂದು ತಿಂಗಳ ಉಳಿತಾಯ	ರೂ. 20x30 = 600
ಒಂದು ವರ್ಷದ ಉಳಿತಾಯ	ರೂ. 600x12 = 7200
ವಾರ್ಷಿಕ ಶೇ. 8ರಂತೆ ಬಡ್ಡಿ	ರೂ. 318
ವರ್ಷಾಂತ್ಯಕ್ಕೆ ಉಳಿಸಿದ ಮೊತ್ತ	ರೂ. 7518
ಈ ಮೊತ್ತವು 75 ದಿನಗಳ ಆದಾಯಕ್ಕೆ ಸಮನಾದುದು.	

ನಾವು ಎಷ್ಟು ದಿನಗಳ ಕಾಲ ಉಳಿತಾಯ ಮಾಡಬೇಕು?

ನಾವು ಎಷ್ಟು ದೀರ್ಘ ಕಾಲ ಉಳಿತಾಯ ಮಾಡಿದರೆ, ಅಷ್ಟು ನಮ್ಮ ಉಳಿತಾಯ ಹೆಚ್ಚು ಬೆಳೆಯುತ್ತದೆ. ನಾವು ಎಷ್ಟು ಹೆಚ್ಚು ಉಳಿತಾಯ ಮಾಡುತ್ತೇವೋ ಅಷ್ಟು ಆಪತ್ಕಾಲೀನ ಸಂದರ್ಭಗಳನ್ನು ಮತ್ತು ನಿವೃತ್ತಿಯ ವೃದ್ಧಾಪ್ಯವನ್ನು ಎದುರಿಸಲು ಹಾಗೂ ನಮ್ಮ ಅಗತ್ಯಗಳಿಗಾಗಿ ಬೇರೆಯವರ ಮೇಲೆ ಅವಲಂಬಿತವಾಗದಂತಿರಲು ಸಿದ್ಧರಿರುತ್ತೇವೆ. ನಮ್ಮ ಉಳಿತಾಯ ಹೆಚ್ಚಿದಂತೆ, ನಮ್ಮ ಅಗತ್ಯಗಳಿಗಾಗಿ ಬೇರೆಯವರಿಂದ ಸಾಲ ಪಡೆಯುವ ಪರಿಸ್ಥಿತಿ ಬರುವುದಿಲ್ಲ. ನಾವು ದೀರ್ಘಾವಧಿಯವರೆಗೆ ಉಳಿತಾಯ ಮಾಡುವುದರಿಂದ, ಬಡ್ಡಿ ಸೇರಿ ನಮ್ಮ ಉಳಿತಾಯ ದ್ವಿಗುಣಿತವಾಗುತ್ತಾ ಹೋಗುತ್ತದೆ.

ಪ್ರತಿವರ್ಷ ಗಳಿಸಿದ ಹಣ (ರೂ.)	1000	1000	1000
ಉಳಿತಾಯದ ವರ್ಷಗಳು (ರೂ.)	40	30	20
ನಮ್ಮ ಉಳಿತಾಯದ ಹಣ (ರೂ.)	40000	30000	20000
ವರ್ಷಕ್ಕೊಮ್ಮೆ ಶೇಕಡ 10ರ ಬಡ್ಡಿಯ ಗಳಿಕೆ (ರೂ.)	422878	142033	39900
65ನೇ ವಯಸ್ಸಿಗೆ ಒಟ್ಟು ಮೊತ್ತ (ರೂ.)	462878	172033	59900

***

ಬ್ಯಾಂಕಿನಲ್ಲಿ ಹಣ ಉಳಿತಾಯ

ಹಣ ಉಳಿತಾಯ ಮಾಡುವುದೆಲ್ಲಿ?

ನಾವು ನಮ್ಮ ಹಣವನ್ನು ಗೋಲಕದಲ್ಲಿಯೋ ದಿಂಬಿನ ಕೆಳಗೋ ಇಡಬಹುದು. ಆದರೆ ಆಗ ಏನಾಗುತ್ತದೆ? ಅದರ ಸುರಕ್ಷತೆಯ ಬಗ್ಗೆ ನಮಗೆ ಸದಾ ಚಿಂತೆಯಾಗುತ್ತಿರುತ್ತದೆ. ಕೆಲವೊಮ್ಮೆ ಇಲಿಗಳೋ ಹುಳಗಳೋ ನಮ್ಮ ಕಠಿಣ ದುಡಿಮೆಯ ಹಣವನ್ನು ತಿಂದು ಹಾಕಿಬಿಡಬಹುದು. ಯಾರಾದರೂ ಅದನ್ನು ಕದಿಯಲೂ ಬಹುದು ಅಥವಾ ಅದನ್ನು ಯಾರಾದರೂ ಬಳಸಿಕೊಳ್ಳಬಹುದು ಅಥವಾ ಯಾರಿಗಾದರೂ ಅದನ್ನು ಸಾಲ ಕೇಳಬೇಕೆಂದೆನಿಸಬಹುದು. ಅಲ್ಲದೆ ಮನೆಯಲ್ಲಿಟ್ಟ ಉಳಿತಾಯದ ಹಣ ಬೆಳೆಯುವುದೇ ಇಲ್ಲ. ಉಳಿತಾಯವನ್ನು ಇಡುವ ಅತ್ಯುತ್ತಮ ಸ್ಥಳವೆಂದರೆ ಬ್ಯಾಂಕಿನ ಖಾತೆಯಲ್ಲಿ ಠೇವಣಿ ಇಡುವುದು. ಸಣ್ಣ ಪ್ರಮಾಣದ ಹಣವನ್ನು ಗೋಲಕದಲ್ಲಿಡಬಹುದಾಗಿದ್ದು, ನಮ್ಮ ಉಳಿತಾಯವನ್ನು ಬ್ಯಾಂಕಿನಲ್ಲಿಡುವುದು ಹೆಚ್ಚು ವಿವೇಚನೆಯುಳ್ಳದ್ದು.

ನಿಮ್ಮ ಕಠಿಣ ದುಡಿಮೆಯ ಹಣವನ್ನು ಕಳೆದುಕೊಳ್ಳಬೇಡಿ, ಸದಾ ಬ್ಯಾಂಕ್ ಖಾತೆಯಲ್ಲಿ ಉಳಿತಾಯ ಮಾಡಿ.

ಬ್ಯಾಂಕಿನಲ್ಲಿ ಹಣ ಏಕೆ ಉಳಿತಾಯ ಮಾಡಬೇಕು?

ಬ್ಯಾಂಕುಗಳು ನಿಯಂತ್ರಣಕ್ಕೆ ಒಳಪಡುವುದರಿಂದ ಅಲ್ಲಿ ಉಳಿತಾಯ ಮಾಡುವ ಹಣ ಕ್ಷೇಮವಾಗಿರುತ್ತದೆ. ಈ ಉಳಿತಾಯವನ್ನು ಒಟ್ಟುಗೂಡಿಸಿ ರಾಷ್ಟ್ರ ನಿರ್ಮಾಣಕ್ಕೆ ಬಳಸಲಾಗುತ್ತದೆ. ಬ್ಯಾಂಕಿನಲ್ಲಿ ಹಣವು ಸುರಕ್ಷಿತವಾಗಿರುತ್ತದೆಯೆನ್ನುವುದರ ಜೊತೆಗೆ ಅಲ್ಲಿ ಹಣವನ್ನು ಠೇವಣಿಯಿಡುವುದಕ್ಕೆ ಯಾವುದೇ ಶುಲ್ಕ ನೀಡಬೇಕಿಲ್ಲ. ಬದಲಿಗೆ ನಮ್ಮ ಹಣಕ್ಕೆ ಬ್ಯಾಂಕಿನವರು ಬಡ್ಡಿಯನ್ನು ಕೊಡುತ್ತಾರೆ. ಅದರಿಂದ ನಮ್ಮ ಹಣವು ಬೆಳೆಯುತ್ತದೆ. ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟ ಹಣವನ್ನು ನಾವು ನಮಗೆ ಅಗತ್ಯ ಬಿದ್ದಾಗ ಬಳಸಿಕೊಳ್ಳಬಹುದು. ಬ್ಯಾಂಕಿನ ವ್ಯವಹಾರಗಳು ಪಾರದರ್ಶಕವಾಗಿರುತ್ತವೆ. ಬ್ಯಾಂಕುಗಳು ಇತರ ಉಪಯುಕ್ತ ಸೇವೆಯನ್ನೂ ನೀಡುತ್ತವೆ. ಬ್ಯಾಂಕಿನಲ್ಲಿ ನಮ್ಮ ಠೇವಣಿ ಖಾತೆಗಳಿದ್ದರೆ ನಮಗೆ ಸಾಲ ಮತ್ತು ರವಾನೆಯ ಸೌಲಭ್ಯಗಳು ಕಡಿಮೆ ದರದಲ್ಲಿ ಲಭಿಸುತ್ತವೆ. ನಮ್ಮ ಮರಣಾನಂತರ ನಮ್ಮ ಹಣಕ್ಕೆ ಉತ್ತರಾಧಿಕಾರಿಯಾಗಬಹುದಾದವರ ಹೆಸರನ್ನು ನಾಮಕರಣ ಮಾಡಬಹುದು.

ನಾಮನಿರ್ದೇಶನ ಮಾಡುವುದು ಎಂದರೆ ಏನು?

ಠೇವಣಿದಾರನು ತನ್ನ ಮರಣಾನಂತರ ತನ್ನ ಖಾತೆಯಲ್ಲಿನ ಹಣವನ್ನು ಪಡೆಯಲು ಯಾವುದೇ ವ್ಯಕ್ತಿಯನ್ನು ನಿಗದಿಪಡಿಸಲು ಇರುವ ಸೌಲಭ್ಯವೇ ನಾಮನಿರ್ದೇಶನ ಸೌಲಭ್ಯ. ಆದ್ದರಿಂದ ಬ್ಯಾಂಕ್ ಖಾತೆಯನ್ನು ತೆರೆಯುವಾಗ ಯಾವಾಗಲೂ ನಾಮನಿರ್ದೇಶನ ಮಾಡುವುದು ವಿವೇಕಯುತ ನಿರ್ಧಾರ. ಇದರಿಂದ ನಾಮನಿರ್ದೇಶಿತಗೊಂಡ ವ್ಯಕ್ತಿಗೆ ಗತಿಸಿದ ವ್ಯಕ್ತಿಯ ಹಣವು ಸಲೀಸಾಗಿ ದೊರೆಯುತ್ತದೆ.

ಬ್ಯಾಂಕ್ ಖಾತೆಯನ್ನು ಹೊಂದುವುದರಿಂದ ಇರುವ ಅನುಕೂಲಗಳೇನು?

* ಬ್ಯಾಂಕ್ ಖಾತೆಯು ನಮಗೆ ಒಂದು ಗುರುತನ್ನು ಕೊಡುತ್ತದೆ. ಇದನ್ನು ಎಲ್ಲ ಸರ್ಕಾರಿ ಸಂಸ್ಥೆಗಳು ಮಾನ್ಯ ಮಾಡುತ್ತವೆ.
* ಬ್ಯಾಂಕ್ ಖಾತೆಯ ವ್ಯವಹಾರಗಳು ಪಾರದರ್ಶಕವಾಗಿರುತ್ತವೆ. ನಮ್ಮ ಎಲ್ಲ ಠೇವಣಿಗಳು, ಹಿಂಪಡೆದ ಹಣ, ಬಡ್ಡಿ ಇತ್ಯಾದಿ ವಿವರಗಳು ನಮಗೆ ಸ್ಪಷ್ಟವಾಗಿ ತಿಳಿಯುತ್ತವೆ.
* ಒಂದೇ ತರಹದ ಗ್ರಾಹಕರಿಗೆ, ಬ್ಯಾಂಕಿನ ನಿಯಮಗಳು ಸಮಾನವಾಗಿ ಅನ್ವಯವಾಗುವುದರಿಂದ ಭೇದಭಾವ ಮೂಡುವುದಿಲ್ಲ.
* ಬ್ಯಾಂಕಿನಲ್ಲಿರುವ ನಮ್ಮ ಹಣ ಸುರಕ್ಷಿತವಾಗಿರುತ್ತದೆ.



* ನಮ್ಮ ಅಗತ್ಯಕ್ಕನುಗುಣವಾಗಿ ಬ್ಯಾಂಕುಗಳು ಉಳಿತಾಯ ಖಾತೆ/ ಆವರ್ತನ ಖಾತೆ ಮತ್ತು ಸ್ಥಿರ ಠೇವಣಿ ಖಾತೆಯೆಂದು ಬ್ಯಾಂಕ್ ಖಾತೆಗಳನ್ನು ತೆರೆಯಲು ಅನುವುಮಾಡಿಕೊಡುತ್ತವೆ ಮತ್ತು ಅವುಗಳ ಮೇಲೆ ಬಡ್ಡಿಯನ್ನೂ ಕೊಡುತ್ತವೆ.
* ನಮ್ಮ ಕೂಲಿ/ ಸಂಬಳ ಮುಂತಾದವುಗಳನ್ನು ನೇರವಾಗಿ ನಮ್ಮ ಖಾತೆಗೆ ಜಮಾ ಪಡೆಯಬಹುದು.
* ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ವಯದಂತಹ ಯೋಜನೆಗಳಿಂದ ಬರುವ ಕೂಲಿ, ಪಿಂಚಣಿ ಹಣ ಇತ್ಯಾದಿ ಸಾಮಾಜಿಕ ಪ್ರಯೋಜನಗಳನ್ನು ನೇರವಾಗಿ ನಮ್ಮ ಖಾತೆಗೆ ವಿದ್ಯುನ್ಮಾನ ಪ್ರಯೋಜನ ವರ್ಗಾವಣೆ (ಇಬಿಟಿ)ಯ ಮೂಲಕ ಪಡೆಯಬಹುದಾಗಿದೆ.
* ನಮಗೆ ಅಗತ್ಯ ಬಿದ್ದಾಗ ನಮ್ಮ ಹಣವನ್ನು ಜಮಾ ಮಾಡಬಹುದು, ಇಲ್ಲವೆ ಹಿಂದಕ್ಕೆ ಪಡೆಯಬಹುದು.
* ನಮಗೆ ಅಗತ್ಯ ಬಿದ್ದಾಗ ಬ್ಯಾಂಕುಗಳಿಂದ ಸಾಲ ಪಡೆಯಬಹುದು. ಲಾಭದಾಯಕವಾದ ಉದ್ದೇಶಗಳಿಗಾಗಿ ಬ್ಯಾಂಕುಗಳು ನ್ಯಾಯಸಮ್ಮತವಾದ ಬಡ್ಡಿ ದರಗಳಲ್ಲಿ ಸಾಲವನ್ನು ಕೊಡುತ್ತವೆ. ನಮಗೆ ಬ್ಯಾಂಕ್ ಖಾತೆಯಿದ್ದರೆ ಸಾಲವನ್ನು ಮಂಜೂರು ಮಾಡುವುದು ಬ್ಯಾಂಕಿನವರಿಗೆ ಸುಲಭವಾಗುತ್ತದೆ.
* ನಾವು ಬ್ಯಾಂಕಿನ ಮೂಲಕ ಹಣ ವರ್ಗಾವಣೆ ಮಾಡಬಹುದು.

ಉಳಿತಾಯ ಖಾತೆ ಬ್ಯಾಂಕಿನಲ್ಲಿ ಎಲ್ಲ ರೀತಿಯ ಸೇವೆಯನ್ನು ಪಡೆಯುವ ಕೀಲಿಕೈ.

ವಿದ್ಯುನ್ಮಾನ ಪ್ರಯೋಜನ ವರ್ಗಾವಣೆ (ಇಬಿಟಿ) ಎಂದರೆ ಏನು?

ಸಾಮಾಜಿಕ ಸುರಕ್ಷತೆಯ ಪ್ರಯೋಜನಗಳಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ, ವೃದ್ಧಾಪ್ಯ ಪಿಂಚಣಿ, ವಿಧವಾ ಮಾಸಾಶನ, ಎಲ್‌ಪಿಜಿ ಸಬ್ಸಿಡಿ ಇತ್ಯಾದಿ ಯೋಜನೆಗಳ ಹಣದ ವರ್ಗಾವಣೆಗಾಗಿ ಇರುವ ಸೌಲಭ್ಯವೇ ವಿದ್ಯುನ್ಮಾನ ಪ್ರಯೋಜನ ವರ್ಗಾವಣೆ. ನಮಗೆ ಸಂದಾಯವಾಗಬೇಕಿರುವ ಹಣವು ಸಕಾಲದಲ್ಲಿ ಮತ್ತು ಪರಿಣಾಮಕಾರಿಯಾಗಿ ಯಾವುದೇ ಮಧ್ಯವರ್ತಿಯ ಪಾತ್ರವಿಲ್ಲದೆ ನಮ್ಮ ಖಾತೆಗೆ ಜಮೆಯಾಗುತ್ತದೆ. ಈಗ ಚಾಲ್ತಿಯಲ್ಲಿರುವ ಕೈಯಿಂದಲೇ ನಿರ್ವಹಿಸುತ್ತಿರುವ ವ್ಯವಸ್ಥೆಯಲ್ಲಿರುವ ವಿಳಂಬ ಮತ್ತು ಸೋರುವಿಕೆಯನ್ನು ಅದು ತಡೆಯಬಲ್ಲುದು. ನಮಗೆ ಬೇಕೆನಿಸಿದಾಗ ನಮ್ಮ ಖಾತೆಯಿಂದ ನಾವು ಹಣ ಹಿಂದಕ್ಕೆ ಪಡೆಯಬಹುದು. ಹಾಗೆಯೇ ಬ್ಯಾಂಕಿನ ಇತರ ಸೇವೆಗಳನ್ನೂ ಪಡೆಯಬಹುದು.

ಹಣ ರವಾನೆ ಎಂದರೇನು?

ನಾವಿರುವ ಸ್ಥಳದಲ್ಲೇ ಇದ್ದುಕೊಂಡು ದೇಶದ ಯಾವುದೇ ದೂರದ ಸ್ಥಳದಲ್ಲಿರುವ ಇತರ ಜನರಿಗೆ ಹಣವನ್ನು ಕಳುಹಿಸಬಹುದು. ಬ್ಯಾಂಕುಗಳು ನಮ್ಮ ಹಣವನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ, ಒಬ್ಬ ವ್ಯಕ್ತಿಯಿಂದ ಮತ್ತೊಂದು ವ್ಯಕ್ತಿಗೆ ಸುರಕ್ಷಿತವಾಗಿ, ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ವರ್ಗಾವಣೆ ಮಾಡುತ್ತವೆ. ಆದ್ದರಿಂದ ನಮಗೆ ಬ್ಯಾಂಕ್ ಖಾತೆಯೊಂದಿದ್ದರೆ, ನಾವು ಸುಲಭವಾಗಿ ಬೇರೆ ಊರಿನಲ್ಲಿ ಓದುತ್ತಿರುವ ನಮ್ಮ ಮಕ್ಕಳ ಖಾತೆಗೆ ಹಣ ವರ್ಗಾಯಿಸಬಹುದು. ಬೇರೆ ದೂರದ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಬಂಧುಗಳಿಂದ ನಮ್ಮ ಬ್ಯಾಂಕಿನ ಖಾತೆಗೆ ಹಣವನ್ನು ಸ್ವೀಕರಿಸಬಹುದು.

ಬಡ್ಡಿ ಎಂದರೇನು?

ನಾವು ಹಣವನ್ನು ಉಳಿತಾಯ ಮಾಡಿದಾಗ ಅದು ಗಳಿಸುವ ಹೆಚ್ಚಿನ ಹಣವೇ ಬಡ್ಡಿ ಅಥವಾ ನಾವು ಬೇರೆಯವರಿಂದ ಹಣವನ್ನು ಸಾಲ ಪಡೆದಾಗ ಅಸಲಿನೊಂದಿಗೆ ನೀಡಬೇಕಾದ ಹೆಚ್ಚಿನ ಹಣವೇ ಬಡ್ಡಿ. ನಾವು ಬ್ಯಾಂಕಿನಲ್ಲಿ ಇಡುವ ಹಣ ಸುಮ್ಮನೆ ವ್ಯರ್ಥವಾಗಿ ಕುಳಿತಿರುವುದಿಲ್ಲ. ಆ ಹಣವನ್ನು ಬ್ಯಾಂಕುಗಳು ಇತರ ಜನರಿಗೆ ಸಾಲ ನೀಡುತ್ತವೆ. ಬ್ಯಾಂಕಿನಿಂದ ಯಾರು ಈ ಹಣವನ್ನು ಸಾಲ ಪಡೆಯುತ್ತಾರೋ ಅವರು ಅದಕ್ಕೆ ಬಡ್ಡಿಯನ್ನು ನೀಡುತ್ತಾರೆ.

ಉದಾಹರಣೆಗೆ, ನಾವು ರೂ. 1000 ಗಳನ್ನು ಬ್ಯಾಂಕಿನಲ್ಲಿ ಠೇವಣಿ ಇಡುತ್ತೇವೆ. ಬ್ಯಾಂಕು ಆ ಹಣವನ್ನು ಯಾರಿಗೋ ಸಾಲ ಕೊಡುತ್ತದೆ. ಅವನು ಒಂದು ವರ್ಷದ ನಂತರ ಬ್ಯಾಂಕಿಗೆ ರೂ. 100 ಗಳ ಶುಲ್ಕವನ್ನು ಕೊಡುತ್ತಾನೆ. ಅದರ ಒಂದು ಭಾಗವನ್ನು ಅಂದರೆ ರೂ. 40 ಬ್ಯಾಂಕು ನಮಗೆ ನೀಡುತ್ತದೆ. ರೂ. 1000 ಗಳನ್ನು ಒಂದು ವರ್ಷಗಳ ಕಾಲ ಬ್ಯಾಂಕಿನಲ್ಲಿ ಇಟ್ಟಿದ್ದಕ್ಕೆ ನಮಗೆ ದೊರಕುವ ಈ ಹೆಚ್ಚುವರಿ ಹಣವೇ ಬಡ್ಡಿ.

ಲೇವಾದೇವಿ ಮಾಡುವವರು ಹಾಕುವ ಬಡ್ಡಿದರವು 3–5% ಇರುತ್ತದೆ. ಹೀಗಿದ್ದೂ ಬ್ಯಾಂಕಿಗೆ ಹೋಲಿಸಿದಾಗ, ಲೇವಾದೇವಿ ಮಾಡುವವರಿಗೆ ಹೇಗೆ ಹೆಚ್ಚು ಬಡ್ಡಿ ಕೊಟ್ಟಂತಾಗುತ್ತದೆ?

ಬ್ಯಾಂಕುಗಳು ನಿಗದಿ ಪಡಿಸುವ ಬಡ್ಡಿದರವು ವಾರ್ಷಿಕವಾದುದು. ಆದರೆ ಲೇವಾದೇವಿ ಮಾಡುವವರು ಮಾಸಿಕ ಬಡ್ಡಿಯನ್ನು ಹಾಕುತ್ತಾರೆ. ಲೇವಾದೇವಿ ಮಾಡುವವರು ಸಾಲಕ್ಕೆ 3% ಬಡ್ಡಿ ಎಂದು ನಿಗದಿಪಡಿಸಿದರೆ, ವರ್ಷಕ್ಕೆ ಅದು 36% ಆಗುತ್ತದೆ. (3X12). ಆದರೆ ಬ್ಯಾಂಕ್ ಸಾಲಕ್ಕೆ 12% ಬಡ್ಡಿ ಎಂದು ನಿಗದಿಪಡಿಸಿದರೆ, ವರ್ಷಕ್ಕೆ ಅದು 12% ಆಗುತ್ತದೆ. ಆದ್ದರಿಂದ ಬ್ಯಾಂಕ್ ನಿಗದಿಪಡಿಸುವ ಬಡ್ಡಿಯು ಲೇವಾದೇವಿಗಾರರ ಬಡ್ಡಿಗಿಂತ ಕಡಿಮೆಯದಾಗಿರುತ್ತದೆ ಮತ್ತು ಲೇವಾದೇವಿಗಾರರಿಂದ ಹಣ ಪಡೆದಾಗ ನಾವು ಹೆಚ್ಚಿನ ಬಡ್ಡಿ ಕೊಡಬೇಕಾಗುತ್ತದೆ.

ವಿವಿಧ ಠೇವಣಿ ಖಾತೆಗಳು ಯಾವುವು?

ಬ್ಯಾಂಕುಗಳು ಈ ಕೆಳಗಿನ ಮೂರು ರೀತಿಯ ಠೇವಣಿಗಳ ಸೇವೆಯನ್ನು ಕೊಡುತ್ತವೆ – ಉಳಿತಾಯ ಠೇವಣಿ, ಸಾವಧಿ ಠೇವಣಿ ಮತ್ತು ಆವರ್ತನ ಠೇವಣಿ:

* **ಉಳಿತಾಯ ಠೇವಣಿ ಖಾತೆ** : ಈ ಖಾತೆಯಲ್ಲಿ ನಮ್ಮ ದಿನನಿತ್ಯದ ಮಿಗುತಾಯವನ್ನು ಶೇಖರಿಸಿಡಬಹುದು. ನಮಗೆ ಅಗತ್ಯ ಬಿದ್ದಾಗ ನಮ್ಮ ಹಣವನ್ನು ಹಿಂತೆಗೆದುಕೊಳ್ಳಬಹುದು. ನಮ್ಮ ಉಳಿತಾಯ ಖಾತೆಯಿಂದ ನಾವು ಓವರ್ ಡ್ರಾಫ್ಟ್ (ಮೀರೆಳೆತ)ನ್ನು ಅಂದರೆ ಆಪತ್ಕಾಲೀನ ಅಗತ್ಯಗಳಿಗಾಗಿನ ಸಾಲವನ್ನು ಪಡೆಯಬಹುದು.
* **ಸಾವಧಿ ಠೇವಣಿ ಖಾತೆ** : ನಮ್ಮ ಅಗತ್ಯಕ್ಕೆ ತಕ್ಕಂತೆ ಒಂದು ನಿರ್ದಿಷ್ಟ ಅವಧಿಗೆಂದು ಹಣವನ್ನು ಠೇವಣಿ ಇಡುವುದು. ನಾವು ಮುಂಚಿತವಾಗಿಯೇ ಒಂದು ನಿರ್ದಿಷ್ಟ ಅವಧಿಗೆಂದು ಹಣವನ್ನು ಠೇವಣಿ ಇಡುವುದರಿಂದ ನಮ್ಮ ಉಳಿತಾಯ ಖಾತೆಯಲ್ಲಿರುವ ಹಣಕ್ಕೆ ದೊರೆಯುವ ಬಡ್ಡಿಗಿಂತ ಹೆಚ್ಚಿನ ಬಡ್ಡಿ ಈ ಖಾತೆಗೆ ದೊರೆಯುತ್ತದೆ. ನಾವು ಗೊತ್ತುಪಡಿಸಿದ ಅವಧಿಗಿಂತ ಮುಂಚೆಯೂ ಹಣವನ್ನು ಹಿಂಪಡೆಯಬಹುದು. ಆದರೆ ಆಗ ನಮ್ಮ ಹಣಕ್ಕೆ ಕಡಿಮೆ ಬಡ್ಡಿ ದೊರೆಯುತ್ತದೆ.
* **ಆವರ್ತನ ಠೇವಣಿ ಖಾತೆ:** ಇದರಲ್ಲಿ ನಿರ್ದಿಷ್ಟ ಅವಧಿಗೆ ನಿಯತವಾಗಿ ಪ್ರತಿ ದಿನ, ಪ್ರತಿ ವಾರ ಅಥವಾ ಪ್ರತಿ ತಿಂಗಳು ಹಣವನ್ನು ಠೇವಣಿ ಇಡುವುದು. ಇದನ್ನು ಮಾಮೂಲಿ ಉಳಿತಾಯವಿಡಲು ಉಪಯೋಗಿಸಬಹುದು.

ನಾವು ಉಳಿತಾಯ ಖಾತೆಯನ್ನು ಹೇಗೆ ತೆರೆಯಬಹುದು?

ಖಾತೆಯನ್ನು ತೆರೆಯಲು ಇರುವ ನಮೂನೆಯನ್ನು ತುಂಬಿಸಿ, ಅದರೊಂದಿಗೆ ನಮ್ಮ ಭಾವಚಿತ್ರವನ್ನು ಲಗತ್ತಿಸಿ ಮತ್ತು ಕೆ.ವೈ.ಸಿ. ನಿಯಮವು ಹೇಳುವ ಕೆಲವು ಅಗತ್ಯಗಳನ್ನು ಎಂದರೆ, ನಮ್ಮ ಗುರುತಿನ ಸಾಕ್ಷ್ಯ, ವಾಸದ ವಿಳಾಸದ ಸಾಕ್ಷ್ಯ ಇತ್ಯಾದಿಗಳನ್ನು ಲಗತ್ತಿಸಿ ಬ್ಯಾಂಕಿಗೆ ನಾವು ಸಲ್ಲಿಸಬೇಕು.

ನಮ್ಮ ಕೈಯಲ್ಲಿ ಹಣವಿಲ್ಲದಿರುವಾಗ ಬ್ಯಾಂಕ್ ಖಾತೆಯನ್ನು ತೆಗೆಯುವುದು ಹೇಗೆ?

ಈಗ ಖಾತೆಯನ್ನು ತೆರೆಯಬೇಕೆಂದರೆ ಅದಕ್ಕೆ ನಮ್ಮಲ್ಲಿ ಹಣವಿರಬೇಕೆಂದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲ ಬ್ಯಾಂಕುಗಳಿಗೂ ಉಳಿತಾಯ ಖಾತೆಯನ್ನು ಶೂನ್ಯ ಶಿಲ್ಕಿನೊಂದಿಗೆ ತೆರೆಯುವ ಅವಕಾಶ ಕಲ್ಪಿಸಬೇಕೆಂದು ನಿರ್ದೇಶಿಸಿದೆ. ಅದನ್ನು ಮೂಲಭೂತ ಉಳಿತಾಯ ಬ್ಯಾಂಕ್ ಠೇವಣಿ ಖಾತೆಯೆಂದು ಕರೆಯಲಾಗುತ್ತದೆ. ಈ ಖಾತೆಯನ್ನು ಯಾವ ವ್ಯಕ್ತಿಯಾದರೂ ಕನಿಷ್ಠ ಶಿಲ್ಕಿನ ಹಣವೂ ಇಲ್ಲದೆ ತೆರೆಯಬಹುದಾಗಿದೆ.

ಮೂಲಭೂತ ಉಳಿತಾಯ ಬ್ಯಾಂಕ್ ಠೇವಣಿ ಖಾತೆಯ ಲಕ್ಷಣಗಳು ಯಾವುವು?

ಮೂಲಭೂತ ಉಳಿತಾಯ ಬ್ಯಾಂಕ್ ಠೇವಣಿ ಖಾತೆಯನ್ನು ಶೂನ್ಯ ಶಿಲ್ಕಿನೊಂದಿಗೆ ತೆರೆಯಬಹುದಾಗಿದೆ. ಎಷ್ಟು ಬಾರಿ ಹಣವನ್ನು ಜಮಾ ಮಾಡಿದರೂ, ಬ್ಯಾಂಕುಗಳು ಅದಕ್ಕೆ ಶುಲ್ಕ ವಿಧಿಸುವುದಿಲ್ಲ. ಅದರ ಜೊತೆಗೆ ತಿಂಗಳಲ್ಲಿ ನಾಲ್ಕು ಬಾರಿ ಹಣವನ್ನು ಹಿಂತೆಗೆದರೂ ಶುಲ್ಕ ವಿಧಿಸುವುದಿಲ್ಲ. ಇದರೊಂದಿಗೆ ಯಾವುದೇ ಶುಲ್ಕವಿಲ್ಲದೆ ಒಂದು ಪಾಸ್ ಬುಕ್ ಮತ್ತು ಒಂದು ಎಟಿಎಂ/ ಸ್ಮಾರ್ಟ್ ಕಾರ್ಡ್‌ನ್ನು ಕೊಡಲಾಗುತ್ತದೆ. ಈ ಖಾತೆಯನ್ನು ನಮ್ಮ ದಿನ ನಿತ್ಯದ ಅಗತ್ಯಗಳಾದ ಠೇವಣಿ, ಹಿಂತೆಗೆತ, ಹಣರವಾನೆ, ನೇರ ಜಮೆ ಮುಂತಾದವಕ್ಕೆ ಬಳಸಬಹುದಾಗಿದೆ.

ನಿಮ್ಮ ಗ್ರಾಹಕನನ್ನು ತಿಳಿದುಕೊಳ್ಳಿ (ಕೆವೈಸಿ) ಎಂದರೇನು?

ಕೆವೈಸಿ ನಿಯಮಗಳ ಪ್ರಕಾರ ಬ್ಯಾಂಕುಗಳು ನಮ್ಮ ವೈಯಕ್ತಿಕ ವಿವರಗಳನ್ನು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಆದ್ದರಿಂದ ನಾವು ಅದಕ್ಕೆ ಅಗತ್ಯವಾದ ಕೆವೈಸಿ ದಾಖಲೆಗಳಾದ ಭಾವಚಿತ್ರ, ನಮ್ಮ ಗುರುತಿನ ಸಾಕ್ಷ್ಯ, ನಮ್ಮ ವಾಸದ ವಿಳಾಸದ ಸಾಕ್ಷ್ಯಗಳನ್ನು ಖಾತೆ ತೆರೆಯುವ ನಮೂನೆಯೊಂದಿಗೆ ಸಲ್ಲಿಸಬೇಕು. 'ಆಧಾರ್ ಕಾರ್ಡ್'ನ ಆಧಾರದ ಮೇಲೆಯೂ ಈ ಖಾತೆಯನ್ನು ತೆರೆಯಬಹುದು. ಈ ಮೇಲಿನ ದಾಖಲೆಗಳಿಲ್ಲದವರು ಸಡಿಲಗೊಳಿಸಿದ ಕೆವೈಸಿ ನಿಯಮಾನುಸಾರ ನರೇಗ ಜಾಬ್ ಕಾರ್ಡ್ ಅಥವಾ ಸ್ವಯಂ ದೃಢೀಕರಣದ ಆಧಾರದ ಮೇಲೆಯೂ ಈ ಖಾತೆಯನ್ನು ತೆರೆಯಬಹುದು. ಈ ಸಡಿಲಗೊಳಿಸಿದ ವಿಧಾನದಲ್ಲಿ ತೆರೆಯಲಾದ ಖಾತೆಯನ್ನು ಸಣ್ಣ ಖಾತೆಯೆಂದು ಪರಿಗಣಿಸಲಾಗುವುದು ಮತ್ತು ಅವು ಕೆಲವೊಂದು ಮಿತಿಗಳಿಗೆ ಒಳಪಟ್ಟಿರುತ್ತವೆ.

ಹಳ್ಳಿಯಲ್ಲಿ ಯಾವುದೇ ಬ್ಯಾಂಕ್ ಶಾಖೆಗಳಿಲ್ಲದಿದ್ದರೆ, ಆಗ ಬ್ಯಾಂಕ್ ಖಾತೆಯನ್ನು ತೆರೆಯುವುದು ಹೇಗೆ?

ಈಗ ನಮ್ಮ ಹಳ್ಳಿಯಲ್ಲಿ ಬ್ಯಾಂಕ್ ಸೌಲಭ್ಯಗಳನ್ನು ಹೊಂದಲು ಬ್ಯಾಂಕಿನ ಶಾಖೆಯಿರಲೇಬೇಕೆಂದೇನೂ ಇಲ್ಲ. ಬ್ಯಾಂಕುಗಳು ಬಿ.ಸಿ. (ವ್ಯವಹಾರ ಪ್ರತಿನಿಧಿ)ಗಳನ್ನು ಬ್ಯಾಂಕಿನ ಏಜೆಂಟರಾಗಿ ಕೆಲಸ ಮಾಡಲು ನೇಮಕ ಮಾಡುತ್ತಿದ್ದಾರೆ. ಇವರುಗಳು ಆ ಪ್ರದೇಶದವರೇ ಆಗಿದ್ದು ಅವರ ಬೇರುಗಳು ಆ ಪ್ರಾಂತ್ಯದಲ್ಲಿದ್ದು, ಆ ಪ್ರಾಂತ್ಯದ ಆರ್ಥಿಕ ಹಿತಾಸಕ್ತಿಗಳನ್ನು ಉಳ್ಳವರಾಗಿರುತ್ತಾರೆ. ಬಿ.ಸಿ.ಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಬ್ಯಾಂಕ್ ಅಧಿಕಾರಿಗಳು ಅವರನ್ನು ಆ ಊರಿನ ಹಳ್ಳಿಯ ಜನರಿಗೆ ಪರಿಚಯ ಮಾಡಿಸುತ್ತಾರೆ. ನಾವು ಗ್ರಾಮ ಪಂಚಾಯತಿಯ ಮೂಲಕವೂ ಬಿಸಿಗಳ ಬಗೆಗಿನ ಮಾಹಿತಿಯನ್ನು ಪಡೆಯಬಹುದು.

ಬಿ.ಸಿ. ಯೆಂದರೆ ಏನು? ಬಿ.ಸಿ.ಗಳು ಹೇಗೆ ಕಾರ್ಯ ನಿರ್ವಹಿಸುತ್ತಾರೆ?

ಬ್ಯಾಂಕಿನ ಏಜೆಂಟರಾಗಿ ಕೆಲಸ ಮಾಡಲು ಸ್ಥಳೀಯ ಮಂದಿ ಮತ್ತು ಇತರರನ್ನು ಬಿ.ಸಿ.ಗಳಾಗಿ ನೇಮಕಮಾಡಲು ಬ್ಯಾಂಕುಗಳಿಗೆ ಅನುಮತಿ ನೀಡಲಾಗಿದೆ. ಬಿ.ಸಿ.ಗಳು ಮಾಹಿತಿ ಸಂವಹನ ತಾಂತ್ರಿಕತೆಯನ್ನಾಧರಿಸಿದ (ಐಸಿಟಿ) ಸಾಧನಗಳನ್ನು ಕೈಚಾಲಿತ ಯಂತ್ರ, ಸ್ಮಾರ್ಟ್ ಕಾರ್ಡ್ ಆಧಾರಿತ ಸಾಧನಗಳು, ಮೊಬೈಲ್ ಫೋನ್‌ಗಳು, ಇತ್ಯಾದಿಗಳ ಮೂಲಕ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಬಹುದು.

ನಿಮ್ಮ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆ

ಬಿ.ಸಿ. ಯೊಂದಿಗೆ ನಮ್ಮ ಹಣವನ್ನು ಠೇವಣಿ ಇಟ್ಟರೆ ಹಣ ಸುರಕ್ಷಿತವಾಗಿರುತ್ತದೆಯೇ?

ಬ್ಯಾಂಕಿನ ಶಾಖೆಗಳು ನಮ್ಮ ವಾಸಸ್ಥಳದಿಂದ ದೂರವಿದ್ದರೆ ಬ್ಯಾಂಕಿಂಗ್ ಸೇವೆಯನ್ನು ನಮ್ಮ ಮನೆ ಬಾಗಿಲಿಗೆ ತರಲು ಇರುವ ಸಾಧನ ಬಿ.ಸಿ. ಬಿ.ಸಿ.ಯೊಂದಿಗೆ ನಮ್ಮ ಹಣವನ್ನು ಇಡುವುದು ಬ್ಯಾಂಕಿನಲ್ಲಿ ಹಣವನ್ನು ಠೇವಣಿ ಇಟ್ಟಂತೆಯೇ. ಇದರಲ್ಲಿ ವ್ಯವಹಾರಗಳು 'ಐಸಿಟಿ' ಸಾಧನಗಳ ಮೂಲಕ ನಡೆಯುತ್ತವೆ ಮತ್ತು ವ್ಯವಹಾರದ ಲೆಕ್ಕಗಳು ಬ್ಯಾಂಕಿನ ಲೆಕ್ಕ ಪುಸ್ತಕದಲ್ಲಿ ನಮೂದಾಗುತ್ತಿರುತ್ತವೆ. ಗ್ರಾಹಕರು ಹಣವನ್ನು ಜಮೆ ಮಾಡಿದ್ದಕ್ಕೆ ಮತ್ತು ಹಿಂತೆಗೆದುಕೊಂಡುದಕ್ಕೆ ಬ್ಯಾಂಕಿನ ಪರವಾಗಿ ಬಿ.ಸಿ.ಯು ರಸೀತಿಯನ್ನು ನೀಡುವುದರಿಂದ ತಮ್ಮ ವ್ಯವಹಾರಗಳ ಬಗ್ಗೆ ಗ್ರಾಹಕರಿಗೆ ತಕ್ಷಣವೇ ತಾಳೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಇದರ ಜೊತೆಗೆ, ಬಿಸಿಯೊಂದಿಗೆ ನಾವು ಮಾಡುವ ವ್ಯವಹಾರಗಳನ್ನು ನಮ್ಮ ಬಯೋಮೆಟ್ರಿಕ್ ಅಥವಾ ಪಿನ್ ಸಂಖ್ಯೆಯೊಂದಿಗೆ ನಡೆಸುವುದರಿಂದ ಬೇರೆಯವರು ನಮ್ಮ ಖಾತೆಯನ್ನು ಬಳಸುವುದಕ್ಕೆ ಆಸ್ಪದವಿರುವುದಿಲ್ಲ.

ಬಿ.ಸಿ.ಯ ಮೂಲಕ ನಮಗೆ ಲಭ್ಯವಾಗುವ ಸೇವೆಗಳು ಯಾವುವು?

ಸ್ಥಿರ ಠೇವಣಿ, ಆವರ್ತನ ಠೇವಣಿ ಮತ್ತು ಓಡಿ ಸೌಲಭ್ಯಗಳನ್ನೊಳಗೊಂಡ ಉಳಿತಾಯ ಖಾತೆಯ ಸೌಲಭ್ಯಗಳನ್ನು ಬಿ.ಸಿ. ನೀಡುತ್ತದೆ. ನಮ್ಮ ಖಾತೆಯಿಂದ ಹಣವನ್ನು ರವಾನೆ ಮಾಡುವ ಮತ್ತು ನಮ್ಮ ಖಾತೆಗೆ ಹಣವನ್ನು ಸ್ವೀಕರಿಸುವ ಸೌಕರ್ಯವನ್ನು ಬಿ.ಸಿ. ನೀಡುತ್ತದೆ. ಇದರ ಜೊತೆಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ಮೂಲಕ ಆದಾಯ ತರುವ ಕೃಷಿ ಚಟುವಟಿಕೆಗಳಿಗೆ ಮತ್ತು ಜನರಲ್ ಕ್ರೆಡಿಟ್ ಕಾರ್ಡ್‌ಗಳ ಮೂಲಕ ಆದಾಯ ತರುವ ಕೃಷಿಯೇತರ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ನೀಡಲಾಗುತ್ತವೆ.

ಓವರ್ ಡ್ರಾಫ್ಟ್ ಅಂದರೆ ಏನು? ಅದು ಇತರ ಸಾಲಗಳಿಗಿಂತ ಹೇಗೆ ಭಿನ್ನ?

ನಮ್ಮ ಆಪತ್ಕಾಲದ ವಿವಿಧ ಅಗತ್ಯಗಳನ್ನು ಪೂರೈಸಲು ಉಳಿತಾಯ ಖಾತೆಯೊಳಗೆ ಸಣ್ಣ ಓವರ್ ಡ್ರಾಫ್ಟ್ ಸೌಲಭ್ಯವೂ ಸೇರಿರುವಂತೆ ನೋಡಿಕೊಳ್ಳಲಾಗಿದೆ. ಸಣ್ಣ ಮೊತ್ತದ ಹಣವನ್ನು ಪಡೆಯಲು ಪ್ರತ್ಯೇಕ ದಾಖಲಾತಿಯ ಅಗತ್ಯವಿಲ್ಲದಂತೆ ಓವರ್ ಡ್ರಾಫ್ಟ್‌ಗೆ ನಿಗದಿಪಡಿಸಿರುವ ಗರಿಷ್ಠ ಮಿತಿಯವರೆಗೆ ನಾವು ಹಣವನ್ನು ಹಿಂತೆಗೆಯಬಹುದಾಗಿದೆ. ಒಟ್ಟಿನಲ್ಲಿ ಆಪತ್ಕಾಲದ ಸಂದರ್ಭದಲ್ಲಿ ಸಕಾಲಕ್ಕೆ ಒದಗುವಂತೆ ಅದು ಹಣದ ಪೂರೈಕೆಯನ್ನು ನೋಡಿಕೊಳ್ಳುತ್ತದೆ. ಇದು ಒಂದು ರೀತಿಯಲ್ಲಿ ಬ್ಯಾಂಕ್ ನೀಡುವ ಸಾಲವಾದ್ದರಿಂದ ಓವರ್ ಡ್ರಾಫ್ಟ್ ಹಣಕ್ಕೆ ಸ್ವಲ್ಪ ಬಡ್ಡಿಯನ್ನು ನಾವು ಕೊಡಬೇಕಾಗುತ್ತದೆ. ಆದರೆ ಬ್ಯಾಂಕ್ ನೀಡುವ ಇತರ ಸಾಲಗಳಾದ ಕೆ.ಸಿ.ಸಿ ಮತ್ತು ಜಿ.ಸಿ.ಸಿ. ಸೌಲಭ್ಯಗಳನ್ನು ಬ್ಯಾಂಕುಗಳು ನಿರ್ದಿಷ್ಟ ಉದ್ದೇಶಕ್ಕಾಗಿಯೇ ಕೊಡುತ್ತವೆ.

***

ಸಾಲ ಸೌಲಭ್ಯ

ಆದಾಯ ಮತ್ತು ಸಾಲ– ಇವೆರಡರ ನಡುವಿನ ವ್ಯತ್ಯಾಸವೇನು?

ಪ್ರತಿಯೊಂದು ಕಡ ಮತ್ತು ಸಾಲವೆರಡೂ ಹಿಂದಕ್ಕೆ ಪಾವತಿಸಬೇಕಾದಂತಹುದು. ಅದನ್ನು ಗಳಿಕೆಯ ಹಣ ಅಥವಾ ಆದಾಯ ಎಂದು ಭಾವಿಸಬೇಕಾಗಿಲ್ಲ. ನಾವು ಸಂಪಾದಿಸಿದ ಸಂಬಳದ ಹಣ ಅಥವಾ ಕೂಲಿ 'ಆದಾಯ' ಎಂದೆನಿಸಿಕೊಳ್ಳುತ್ತದೆ. ಆದರೆ ಉದ್ದರಿ ಅಥವಾ ಸಾಲ 'ಆದಾಯ' ಎಂದೆನಿಸಿಕೊಳ್ಳುವುದಿಲ್ಲ. ಬದಲಿಗೆ, ಸಾಲದ ವಿವಿಧ ಕಂತುಗಳನ್ನು ಪಾವತಿಮಾಡುವುದು ಖರ್ಚು ಎಂದೆನಿಸಿಕೊಳ್ಳುತ್ತದೆ.

ನಾವು ಯಾವಾಗ ಸಾಲ ಮಾಡುತ್ತೇವೆ?

ನಮ್ಮ ಖರ್ಚು ನಮ್ಮ ಆದಾಯಕ್ಕಿಂತ ಹೆಚ್ಚಿರುವಾಗ ಅಥವಾ ಯಾವುದಾದರೂ ತುರ್ತಾದ ಖರ್ಚು ಹುಟ್ಟಿಕೊಂಡಾಗ ನಾವು ಸಾಲ ಮಾಡುತ್ತೇವೆ. ನಾವು ಯಾವುದಾದರೂ ವ್ಯಾಪಾರ ವಹಿವಾಟು ನಡೆಸಬೇಕೆಂದು ನಿರ್ಧರಿಸಿದಾಗ ಅದರ ಅಗತ್ಯಕ್ಕಾಗಿ ಹಣವನ್ನು ಸಾಲ ಮಾಡುತ್ತೇವೆ.

ನಮಗೆ ಹಣ ಕಡಿಮೆ ಬಿದ್ದಾಗಲೂ ಸಾಲ ಮಾಡಬೇಕೆ?

ದುಬಾರಿ ಸಾಮಾನುಗಳನ್ನು ಅಥವಾ ಒಡವೆಗಳನ್ನು ಕೊಂಡುಕೊಳ್ಳಲು, ದುಂದು ವೆಚ್ಚದ ವಿವಾಹಕ್ಕಾಗಿ ಮತ್ತು ಭರ್ಜರಿಯಾಗಿ ನಡೆಸುವ ಹಬ್ಬಗಳಿಗಾಗಿ ಹಣವನ್ನು ಸಾಲ ಪಡೆಯಬೇಡಿ. ಈ ಬಾಬ್ತುಗಳಿಗಾಗಿ ನಾವು ಹಣ ಖರ್ಚು ಮಾಡಬೇಕಾದರೆ ಅದನ್ನು ನಮ್ಮ ಆದಾಯ ಅಥವಾ ಕೂಡಿಟ್ಟ ಉಳಿತಾಯದಿಂದ ಮಾಡಬೇಕು. ನಮ್ಮ ಪ್ರಸಕ್ತ ಆದಾಯದಿಂದ, ಇಲ್ಲವೆ ಉಳಿತಾಯ ಹಣದಿಂದ ಬಳಕೆಯ ಖರ್ಚುಗಳನ್ನು ಮಾಡಬೇಕು. ನಾವು ಏನಾದರೂ ದಿನನಿತ್ಯದ ಬಳಕೆಗೆ ಸಾಲಮಾಡುವಂತಹ ಸ್ಥಿತಿಗೆ ದೂಡಲ್ಪಟ್ಟರೆ, ಆಗ ಮೊದಲಿಗೆ ನಾವು ನಮ್ಮ ಪ್ರಸಕ್ತ ಆದಾಯದಲ್ಲಿ ಎಷ್ಟರಮಟ್ಟಿಗೆ ಸಾಲವನ್ನು ಹಿಂತಿರುಗಿಸಬಹುದು ಎಂಬುದನ್ನು ಅಂದಾಜು ಮಾಡಿಕೊಳ್ಳಬೇಕು. ಬಳಕೆಯ ಖರ್ಚುಗಳು ಎಂದೂ ಆದಾಯವನ್ನು ಕೊಡುವುದಿಲ್ಲ. ಹಾಗಿರುವಾಗ ನಾವು ಈ ಸಾಲವನ್ನು ತೀರಿಸುವುದಾದರೂ ಎಲ್ಲಿಂದ? ಬದಲಿಗೆ ನಾವು ಹಳೆಯ ಸಾಲವನ್ನು ತೀರಿಸಲು ವಿವಿಧ ಮೂಲಗಳಿಂದ ಮತ್ತೆ ಮತ್ತೆ ಸಾಲ ಮಾಡುತ್ತಾ ಸಾಲದ ಕೂಪದಲ್ಲಿ ಬೀಳುತ್ತಿರುತ್ತೇವೆ.

ಸರಿಯಾಗಿ ನಿರ್ವಹಿಸದಿದ್ದರೆ ಸಾಲ, ಅದೇ ಆದೀತು ನಿಮಗೆ ಶೂಲ.

ಆದಾಯ ಹುಟ್ಟಿಸುವ ಚಟುವಟಿಕೆಗಳಿಗಾಗಿ ಮಾತ್ರ ಹಣವನ್ನು ಏಕೆ ಸಾಲ ಮಾಡಬೇಕು?

ನಾವು ಸಾಲ ತೆಗೆದುಕೊಂಡಾಗ ಅದನ್ನು ಬಡ್ಡಿಯ ಸಮೇತ ಮರು ಪಾವತಿಸಬೇಕು ಎಂಬ ಅಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ನಾವು ಸಾಲ ಮಾಡುವಾಗ ನಮ್ಮ ಸಾಲ ತೀರಿಸುವ ಸಾಮರ್ಥ್ಯವನ್ನು ಮೊದಲು ಅಂದಾಜು ಮಾಡಿಕೊಳ್ಳಬೇಕು. ನಾವು ಯಾವುದಾದರೂ ವ್ಯಾಪಾರವನ್ನು ಕೈಗೊಂಡಾಗ, ಅದು ನಮ್ಮ ಆದಾಯವನ್ನು ಹೆಚ್ಚಿಸುತ್ತದೆ. ಆಗ ನಮಗೆ ಬಂದ ಆದಾಯದಿಂದ ನಾವು ಸಾಲವನ್ನು ಹಿಂತಿರುಗಿಸಬಹುದು. ಉದಾಹರಣೆಗೆ, ಬೀಜವನ್ನು ಕೊಂಡುಕೊಳ್ಳಲು ನಾವು ಬ್ಯಾಂಕಿನಿಂದ ರೂ. 1000ಗಳನ್ನು ಸಾಲವಾಗಿ ಪಡೆದರೆ, ಅದರಿಂದ ನಾವು 10000ರೂಗಳಷ್ಟು ಬೆಳೆಬಾಳುವ ಬೆಳೆಯನ್ನು ಬೆಳೆದರೆ, ನಾವು ರೂ. 1000ಗೆ ರೂ. 100 ಬಡ್ಡಿಯಂತೆ ಹಿಂತಿರುಗಬಹುದು. ಅಂದರೆ ರೂ. 1100ಗಳನ್ನು ಬ್ಯಾಂಕಿಗೆ ಹಿಂತಿರುಗಿಸಬಹುದು. ಬ್ಯಾಂಕಿಗೆ 1100 ರೂ. ಕೊಟ್ಟರೆ, ಉಳಿದ 8900ರೂ. ಗಳು ನಮಗೆ ಹೆಚ್ಚಿನ ಆದಾಯವಾಗಿ ಬರುತ್ತದೆ. ನಾವು ಸಾಲ ತೆಗೆದುಕೊಳ್ಳುವ ಚಟುವಟಿಕೆ ಬಡ್ಡಿ ಸಮೇತ ಸಾಲದ ಅಸಲನ್ನು ತೀರಿಸುವಂತಿರಬೇಕು. ಇಲ್ಲದಿದ್ದರೆ, ನಮ್ಮ ಹಳೆಯ ಸಾಲಗಳನ್ನು ತೀರಿಸುವುದಕ್ಕೆ ಮತ್ತೊಮ್ಮೆ ಸಾಲ ಮಾಡಬೇಕಾದೀತು.

ನಿಮ್ಮ ಆದಾಯವನ್ನು ಹೆಚ್ಚಿಸುವಂತಹ ಚಟುವಟಿಕೆಗಳಿಗೆ ಸಾಲವನ್ನು ತೆಗೆದುಕೊಳ್ಳಿ.

ನಮ್ಮ ಮಿತಿಯೊಳಗೆ ಸಾಲವನ್ನು ಮಾಡಬೇಕು ಎಂದು ಹೇಳುತ್ತಾರೆ, ಏಕೆ?

ನಾವು ಬ್ಯಾಂಕಿನಿಂದ ತೆಗೆದುಕೊಳ್ಳುವ ಯಾವುದೇ ಸಾಲವನ್ನು ಬಡ್ಡಿಯೊಂದಿಗೆ ಹಿಂತಿರುಗಿಸಬೇಕು. ನಾವು ಸಾಲ ಹಿಂತಿರುಗಿಸುವಷ್ಟು ಹಣವನ್ನು ಸಂಪಾದಿಸುತ್ತಿದೇವೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳಿ. ಇದನ್ನು ಕಂಡುಕೊಳ್ಳುವ ಸರಳವಾದ ದಾರಿಯೆಂದರೆ ನಮ್ಮ ಪ್ರತಿ ತಿಂಗಳ ಆದಾಯ, ಖರ್ಚು ಮತ್ತು ಉಳಿತಾಯವನ್ನು ಗಮನಿಸಬೇಕು. ನಮ್ಮ ಉಳಿತಾಯವು ಸಾಲ ಪಾವತಿಯ ತಿಂಗಳ ಕಂತಿನ ಹಣಕ್ಕಿಂತ ಹೆಚ್ಚಿರಬೇಕು.

***

ಬ್ಯಾಂಕುಗಳಿಂದ ಸಾಲ ಸೌಲಭ್ಯ

ಹಳ್ಳಿಗಳಲ್ಲಿ ಲೇವಾದೇವಿಗಾರರೇ ಮುಂತಾದ ಅನೌಪಚಾರಿಕ ಮೂಲಗಳಿಂದ ಸಾಲಗಳು ಲಭ್ಯವಿರುವಾಗ ಬ್ಯಾಂಕುಗಳಿಂದ ಏಕೆ ಸಾಲ ಪಡೆಯಬೇಕು?

ಬ್ಯಾಂಕುಗಳಿಂದ ಹಣ ಸಾಲ ಪಡೆಯುವುದು ಸ್ವಲ್ಪ ಸಮಯಹಿಡಿಯುತ್ತದೆಯಾದರೂ ಅನೌಪಚಾರಿಕ ಮೂಲಗಳಿಂದ ಸಾಲಗಳನ್ನು ಪಡೆಯುವುದಕ್ಕಿಂತ ಎಂದಿಗೂ ಉತ್ತಮ. ಏಕೆಂದರೆ ಬ್ಯಾಂಕುಗಳು ಅತ್ಯಂತ ಸುರಕ್ಷಿತವಾದ, ವಿಶ್ವಾಸಾರ್ಹವಾದ ಮತ್ತು ಪಾರದರ್ಶಕವಾದ ಹಾಗೂ ಸೂಕ್ತವಾದ ನಿಯಮಾವಳಿಗಳ ಆಧಾರದ ಮೇಲೆ ನಮಗೆ ಸಾಲ ನೀಡುವ ಸಂಸ್ಥೆಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕುಗಳನ್ನು ನಿಯಂತ್ರಿಸುತ್ತದೆ. ಇಲ್ಲಿ ಅತ್ಯುತ್ತಮವಾದ ಅಂಶವೆಂದರೆ, ಅನೌಪಚಾರಿಕ ಮೂಲಗಳಿಂದ ಅಂದರೆ ಬಂಧುಗಳು, ಸ್ನೇಹಿತರು, ಲೇವಾದೇವಿಗಾರರು, ಊರ ಮುಖ್ಯಸ್ಥ ಮುಂತಾದ ಕಡೆಗಳಿಂದ ಪಡೆಯುವ ಸಾಲಗಳಲ್ಲಿನ ಬಡ್ಡಿಗಿಂತ ಬ್ಯಾಂಕುಗಳು ಕಡಿಮೆ ಬಡ್ಡಿಯನ್ನು ವಿಧಿಸುತ್ತವೆ. ಬ್ಯಾಂಕುಗಳು ಸಾಲವನ್ನು ವಿತರಿಸುವುದಕ್ಕೆ ಮುಂಚೆ ಇದರೊಂದಿಗೆ ಸಾಲದ ಸಂಪೂರ್ಣ ವಿವರಗಳನ್ನು ದಾಖಲು ಮಾಡುತ್ತವೆ. ವಿವಾದಗಳೇನಾದರೂ ಏರ್ಪಟ್ಟರೆ, ಅದನ್ನು ಪರಿಹರಿಸಲು ದೂರು ನಿವಾರಣಾ ವ್ಯವಸ್ಥೆಯು ಇರುತ್ತದೆ.

ಬ್ಯಾಂಕುಗಳು ಪಾರದರ್ಶಕವಾಗಿರುತ್ತವೆ ಮತ್ತು ಅತಿ ಕಡಿಮೆ ಬಡ್ಡಿಯನ್ನು ವಿಧಿಸುತ್ತವೆ.

ಬ್ಯಾಂಕುಗಳಲ್ಲಿನ ದೂರು ನಿವಾರಣಾ ವ್ಯವಸ್ಥೆ ಹೇಗಿರುತ್ತದೆ?

ಬ್ಯಾಂಕುಗಳು ನಿಯಂತ್ರಣಕ್ಕೊಳಪಟ್ಟ ಸಂಸ್ಥೆಗಳಾಗಿವೆ. ಪ್ರತಿಯೊಂದು ಬ್ಯಾಂಕಿನಲ್ಲೂ ದೂರು ನಿವಾರಣಾ ಅಧಿಕಾರಿಗಳು ಇರುತ್ತಾರೆ. ಅವರ ಬಗೆಗಿನ ವಿವರಗಳನ್ನು ಎಲ್ಲ ಬ್ಯಾಂಕಿನ ಶಾಖೆಗಳಲ್ಲೂ ಮತ್ತು ಅವರ ವೆಬ್ ತಾಣಗಳಲ್ಲೂ

ಪ್ರಕಟಿಸಿರುತ್ತಾರೆ. ಏನಾದರೂ ಸಮಸ್ಯೆಯುಂಟಾದಾಗ, ನಾವು ನಮ್ಮ ಬ್ಯಾಂಕಿನ ದೂರು ನಿವಾರಣಾ ಅಧಿಕಾರಿಯಲ್ಲಿ ನಮ್ಮ ದೂರನ್ನು ದಾಖಲಿಸಬಹುದು. ಅವರು ನೀಡುವ ಪರಿಹಾರದಿಂದ ನಮಗೆ ತೃಪ್ತಿಯಾಗದಿದ್ದರೆ, ಆಗ ನಮ್ಮ ದೂರನ್ನು ಬ್ಯಾಂಕಿಂಗ್ ಲೋಕಪಾಲರಲ್ಲಿ ಸಲ್ಲಿಸಬಹುದು.

ಅನೌಪಚಾರಿಕವಾದ ಸಾಲ ನೀಡುವ ವ್ಯವಸ್ಥೆಯಲ್ಲಿ ಇದೇ ರೀತಿ ದೂರು ನಿವಾರಣಾ ವ್ಯವಸ್ಥೆಯಿರುತ್ತದೆಯೇ?

ಅನೌಪಚಾರಿಕ ಹಣದ ಮೂಲಗಳು ಯಾವುದೇ ನಿಯಂತ್ರಣಕ್ಕೆ ಒಳಪಡದಿರುವುದರಿಂದ ಅವರಿಗೆ ಯಾವುದೇ ದೂರು ನಿವಾರಣಾ ವ್ಯವಸ್ಥೆಯಿರುವುದಿಲ್ಲ. ಆದ್ದರಿಂದಲೇ ಅನೌಪಚಾರಿಕ ವ್ಯವಸ್ಥೆಯಲ್ಲಿನ ನಿಯಮಗಳು ಮತ್ತು ಷರತ್ತುಗಳಲ್ಲಿ ಹಾಗೂ ವ್ಯವಹಾರಗಳ ದಾಖಲಾತಿಯಲ್ಲಿ ಯಾವುದೇ ಪಾರದರ್ಶಕತೆಯಿರುವುದಿಲ್ಲ.

ಲೇವಾದೇವಿಗಾರರಿಗಿಂತ ಬ್ಯಾಂಕುಗಳು ಸಾಲ ನೀಡಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ, ಏಕೆ?

ಬ್ಯಾಂಕುಗಳು ಸಾರ್ವಜನಿಕರಿಂದ ಠೇವಣಿಯನ್ನು ಸಂಗ್ರಹಿಸುತ್ತವೆ. ಈ ಠೇವಣಿದಾರರ ಹಣವನ್ನು ಅಗತ್ಯವಿರುವ ಜನಗಳಿಗೆ ಸಾಲವಾಗಿ ನೀಡುತ್ತಾರೆ. ಠೇವಣಿದಾರರ ಹಣವನ್ನು ಕಾಪಾಡಲು ಸಾಲಗಾರರು ಹಣದ ಬಳಕೆಯನ್ನು ಸರಿಯಾದ ಉದ್ದೇಶಕ್ಕಾಗಿ ಬಳಸುತ್ತಾರೆಯೋ ಇಲ್ಲವೋ ಎಂಬುದನ್ನು ಖಾತರಿಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಾಲವನ್ನು ಬಿಡುಗಡೆ ಮಾಡುವ ಮುನ್ನ ಸಾಲದ ಯೋಜನೆಯ ಬೇಡಿಕೆಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಲಾಗುತ್ತದೆ. ಇದರಿಂದ ಸಾಲಗಾರರಿಗಾಗುವ ಲಾಭವೆಂದರೆ ಸಾಲದ ವಿವರಗಳ ದಾಖಲೀಕರಣ ದೀರ್ಘ ಅವಧಿಯನ್ನು ತೆಗೆದುಕೊಂಡರೂ ಬ್ಯಾಂಕುಗಳು ಸಾಲಗಾರರನ್ನು ಯಾವುದೇ ರೀತಿ ಮೋಸಗೊಳಿಸುವುದಿಲ್ಲ. ಅದು ಠೇವಣಿದಾರರ ಮತ್ತು ಸಾಲಗಾರರಿಬ್ಬರ ಹಿತಾಸಕಿಯನ್ನು ಕಾಪಾಡುತ್ತದೆ.

ಬ್ಯಾಂಕುಗಳು ನೀಡುವ ವಿವಿಧ ರೀತಿಯ ಸಾಲಗಳು ಯಾವುವು?

ಬ್ಯಾಂಕುಗಳು ಗೃಹಸಾಲ, ಶಿಕ್ಷಣ, ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಚಟುವಟಿಕೆಗಳು, ವ್ಯಾಪಾರ ವಹಿವಾಟು, ಬಳಕೆ ವಸ್ತುಗಳು – ಮುಂತಾದ ವಿವಿಧ ಉದ್ದೇಶಗಳಿಗಾಗಿ ಸಾಲವನ್ನು ನೀಡುತ್ತವೆ. ಹೀಗಾಗಿ ಎಲ್ಲ ರೀತಿಯ ಸಾಲದ ಅಗತ್ಯಗಳನ್ನು ಬ್ಯಾಂಕುಗಳು ಪೂರೈಸುತ್ತವೆ.

ಬ್ಯಾಂಕುಗಳು ನಿಮ್ಮ ಸಾಲದ ಎಲ್ಲ ಅಗತ್ಯಗಳನ್ನು ಪೂರೈಸುತ್ತವೆ.

ನಾನು ಬ್ಯಾಂಕಿನಿಂದ ಹೇಗೆ ಸಾಲವನ್ನು ಪಡೆಯಬಹುದು?

ನಾವು ನಮ್ಮ ಉದ್ದೇಶವನ್ನು ಸೂಚಿಸಿ ಬ್ಯಾಂಕಿಗೆ ಒಂದು ಅರ್ಜಿಯನ್ನು ಸಲ್ಲಿಸಬೇಕು. ಬ್ಯಾಂಕ್ ಈ ವಿವರಗಳನ್ನು ಪರಿಶೀಲಿಸಿ, ನಮ್ಮ ಸಾಲ ಪಾವತಿಸುವ ಸಾಮರ್ಥ್ಯವನ್ನು ಅಂದಾಜು ಮಾಡಿ ಸಾಲವನ್ನು ಮಂಜೂರು ಮಾಡುತ್ತದೆ. ಬ್ಯಾಂಕು ಸೂಚಿಸಿದಂತೆ ವಿವಿಧ ಕಂತುಗಳಲ್ಲಿ ಬಡ್ಡಿಯನ್ನು ಸೇರಿಸಿ ನಾವು ಈ ಸಾಲವನ್ನು ಹಿಂತಿರುಗಿಸಬೇಕು.

ಬ್ಯಾಂಕುಗಳಿಂದ ಪಡೆಯುವ ಸಾಲಗಳ ಖರ್ಚು ಎಷ್ಟು ಆಗುತ್ತದೆ?

ಸಾಲ ಪಡೆದ ಹಣದ ಮೇಲಿರುವ ಬಡ್ಡಿಯ ಹಣವೇ ಸಾಲದ ಖರ್ಚು ಆಗಿರುತ್ತವೆ. ಕೊಡಬೇಕಾದ ಬಡ್ಡಿಯ ಖರ್ಚನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಬ್ಯಾಂಕುಗಳು ಪ್ರತಿ ವರ್ಷ ತಾವು ವಿಧಿಸುವ ಬಡ್ಡಿಯ ದರವನ್ನು ಪ್ರಕಟಿಸುತ್ತಿರುತ್ತವೆ. ಉದಾಹರಣೆಗೆ ವಾರ್ಷಿಕ 12% ಬಡ್ಡಿ ದರ. ಅಂದರೆ, ತಿಂಗಳಿಗೆ 1% ಬಡ್ಡಿ ದರವೆಂದಾಗುತ್ತದೆ. ಸಾಲದ ದರವನ್ನು ನಿರ್ಧರಿಸುವಾಗ ಎಷ್ಟು ಬಾರಿ ಮೊತ್ತವನ್ನು ಆಕರಿಸುತ್ತಾರೆ ಎಂಬುದರ ಮೇಲೆ ಸಾಲದ ವೆಚ್ಚ ನಿರ್ಧರಿತವಾಗುತ್ತದೆ. ಬೇರೆ ಅನೌಪಚಾರಿಕ ಸಾಲ ನೀಡುವ ಮೂಲಗಳು ಈ ರೀತಿ ಸಾಲದ ನಿಜವಾದ ದರ, ಬಡ್ಡಿ ದರಗಳು ಮತ್ತು ಇತರ ಶುಲ್ಕಗಳ ವಿವರಗಳನ್ನು ಪ್ರಕಟಪಡಿಸುವುದಿಲ್ಲ. ಆದರೆ ಬ್ಯಾಂಕುಗಳು ವಿವಿಧ ಉದ್ದೇಶದ ಸಾಲಗಳು, ಬಡ್ಡಿಯ ದರ, ಇತರ ಶುಲ್ಕದ ಎಲ್ಲ ವಿವರಗಳನ್ನು ಸಾರ್ವಜನಿಕರಿಗಾಗಿ ಪ್ರಕಟಿಸುತ್ತವೆ ಮತ್ತು ಇವು ಎಲ್ಲ ಗ್ರಾಹಕರಿಗೂ/ ಉದ್ದೇಶಗಳಿಗೂ ಸಮನಾಗಿರುತ್ತವೆ. ಬ್ಯಾಂಕುಗಳು ಸಮಾನವಾದ ಗ್ರಾಹಕರಿಗೆ ಮತ್ತು ಸಮಾನ ಉದ್ದೇಶಗಳಿಗೆ ಎಷ್ಟು ದರ ವಿಧಿಸುತ್ತೇವೆ, ಎಂಬುದನ್ನು ಸಾರ್ವಜನಿಕವಾಗಿ ಘೋಷಿಸುತ್ತವೆ ಮತ್ತು ಇಂತಹುದನ್ನು ಬೇರೆ ಅನೌಪಚಾರಿಕ ಮೂಲಗಳು ಪ್ರಕಟಿಸುವುದಿಲ್ಲ.

ನಾವು ಸಾಲ ಪಡೆಯುವುದಕ್ಕೆ ಬ್ಯಾಂಕಿಗೆ ಏನಾದರೂ ಗ್ಯಾರಂಟಿ (ಖಾತರಿ) ಕೊಡಬೇಕೆ?

ಇದು ನಾವು ತೆಗೆದುಕೊಳ್ಳುವ ಸಾಲದ ಉದ್ದೇಶ ಮತ್ತು ಪ್ರಕಾರವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ, ಸಣ್ಣ ಸಾಲಗಳಿಗೆ ಯಾವ ಖಾತರಿಯೂ ಬೇಕಾಗುವುದಿಲ್ಲ. ಆದರೆ ದೊಡ್ಡ ಮೊತ್ತದ ಸಾಲಗಳಿಗೆ ನಾವು ಖಾತರಿ ಕೊಡಬೇಕಾಗುತ್ತದೆ. ಸಾಲದ ಸ್ವರೂಪ ಎಂಥದು ಎಂಬುದನ್ನು ನಿರ್ಧರಿಸಿ, ಇದು ಬ್ಯಾಂಕ್ ಸಾಲದ ಮೂಲಕ ಕೊಂಡ ಆಸ್ತಿಗಳ ರೂಪದಲ್ಲಿರಬಹುದು ಅಥವಾ ನಿವೇಶನ, ಮನೆಗಳ ರೂಪದ ಸಹಭದ್ರತೆಗಳಾಗಬಹುದು.

ನಾವು ಸಾಲವನ್ನು ಏಕೆ ಹಿಂತಿರುಗಿಸಬೇಕು?

ಬ್ಯಾಂಕುಗಳು ಠೇವಣಿದಾರರ ಹಣವನ್ನು ಸಾಲ ನೀಡಲು ಬಳಸುತ್ತಾರೆ. ನಾವು ಸಾಲ ಹಿಂತಿರುಗಿಸದಿದ್ದರೆ, ಬ್ಯಾಂಕುಗಳ ಹಣಕಾಸು ಪರಿಸ್ಥಿತಿ ತುಂಬಾ ದುರ್ಬಲವಾಗುತ್ತದೆ. ಠೇವಣಿದಾರರ ಹಣವನ್ನು ಸಕಾಲದಲ್ಲಿ ಠೇವಣಿದಾರರಿಗೆ ಹಿಂತಿರುಗಿಸುವ ಬ್ಯಾಂಕಿನ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಬ್ಯಾಂಕಿನ ಎಲ್ಲ ಠೇವಣಿದಾರರು ಈ ರೀತಿ ಸಾಲ ಹಿಂತಿರುಗಿಸದಿದ್ದರೆ, ಕೊನೆಗೆ ಅಂತಹ ವಿಶೇಷ ಘಟನೆಗಳ ಸಂದರ್ಭದಲ್ಲಿ ನಮ್ಮ ಮತ್ತು ನಮ್ಮ ಬಂಧುಗಳ ಠೇವಣಿಗಳು ಸಂಭಾವ್ಯ ನಷ್ಟವನ್ನು ಎದುರಿಸಬೇಕಾಗುತ್ತದೆ. ಅಲ್ಲದೆ, ನಾವು ಹಿಂತಿರುಗಿಸುವ ಹಣದಿಂದಲೇ ಬ್ಯಾಂಕುಗಳು ಮತ್ತೊಬ್ಬರಿಗೆ ಸಾಲ ನೀಡಲು ಬಳಸುತ್ತವೆ. ಇದೆಲ್ಲದರ ಜೊತೆಗೆ, ನಾವು ತೆಗೆದುಕೊಂಡ ಸಾಲವನ್ನು ಹಿಂತಿರುಗಿಸಿದರೆ ಮಾತ್ರ ನಮಗೆ ಮುಂದೆ ಮತ್ತೆ ಸಾಲ ಪಡೆಯಲು ಸಾಧ್ಯವಾಗುತ್ತದೆ.

ಬ್ಯಾಂಕ್‌ನಿಂದ ಪಡೆದ ಸಾಲವನ್ನು ಹಿಂತಿರುಗಿಸದಿದ್ದರೆ ಏನಾಗುತ್ತದೆ?

ಒಂದು ವೇಳೆ ನಾವು ಸಾಲವನ್ನು ಹಿಂತಿರುಗಿಸದಿದ್ದರೆ, ಗ್ಯಾರಂಟಿಗಾಗಿ ಬ್ಯಾಂಕಿಗೆ ನೀಡಿದ್ದ ನಮ್ಮ ಭದ್ರತೆಯ ಮೇಲಿನ ಸ್ವಾಮ್ಯವನ್ನು ಬ್ಯಾಂಕ್ ಪಡೆದುಕೊಳ್ಳುತ್ತದೆ. ಸಾಲದ ಮೊತ್ತವನ್ನು ಬಡ್ಡಿಯೊಂದಿಗೆ ಹಿಂದಕ್ಕೆ ಪಡೆಯಲು ನಮ್ಮ ವಿರುದ್ಧ ಬ್ಯಾಂಕ್ ಕಾನೂನು ಕ್ರಮವನ್ನು ಜರುಗಿಸಬಹುದು.

***

ಟಿಪ್ಪಣಿ

ಟಿಪ್ಪಣಿ

ಟಿಪ್ಪಣಿ

ಭಾರತೀಯ ರಿಸರ್ವ್ ಬ್ಯಾಂಕ್

ಹೊಣೆ ನಿರಾಕರಣೆ

ಜನ ಸಾಮಾನ್ಯನಿಗೆ ಹಣಕಾಸು ವ್ಯವಹಾರಗಳ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡುವಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮೊದಲ ಹೆಜ್ಜೆಗಳನ್ನಿಟ್ಟಿದೆ. ಈ ಪ್ರಕಟಣೆಯಲ್ಲಿ ವಿವರಿಸಲಾದ ಬ್ಯಾಂಕಿಂಗ್ ಪರಿಕಲ್ಪನೆಗಳು ಜನರಿಗೆ ಸುಲಭವಾಗಿ ಅರ್ಥ ಮಾಡಿಸುವುದಕ್ಕಾಗಿಯೇ ರಚಿತವಾದುವು ಮತ್ತು ಅವುಗಳು ಯಾವುದೇ ತಾಂತ್ರಿಕ ಮತ್ತು ಕಾನೂನು ವಿವರಣೆಗಳಲ್ಲ. ಈ ಮಾಹಿತಿಯನ್ನು ಬಳಸುವವರು, ಅದನ್ನು ಬಳಸುವಾಗ ತಮ್ಮ ಎಚ್ಚರ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಈ ಪ್ರಕಟಣೆಯಲ್ಲಿ ಯಾವುದೇ ತಪ್ಪುಗಳು ಮತ್ತು ಕೊರತೆಗಳು ಉಂಟಾಗದಂತೆ ಪ್ರಯತ್ನಿಸಲಾಗಿದೆ. ಆದರೂ ಯಾವುದೇ ತಪ್ಪು, ಕುಂದು–ಕೊರತೆಗಳು ನಿಮ್ಮ ಗಮನಕ್ಕೆ ಬಂದಲ್ಲಿ ಅದನ್ನು ಈ ಮೇಲ್ಕಂಡ ವಿಳಾಸದವರ ಗಮನಕ್ಕೆ ತಂದರೆ, ಆಗ ಮುಂದಿನ ಪ್ರಕಟಣೆಯ ಸಂದರ್ಭದಲ್ಲಿ ತಿದ್ದುಪಡಿಯನ್ನು ಮಾಡಲಾಗುವುದು. ಈ ಮಾಹಿತಿಯ ಬಳಕೆಯಿಂದ ಯಾರಿಗಾದರೂ ನಷ್ಟ ಅಥವಾ ತೊಂದರೆಯಾದಲ್ಲಿ, ಅದಕ್ಕೆ ಪ್ರಕಾಶಕರು **ಜವಾಬ್ದಾರರಲ್ಲವೆಂಬುದನ್ನು ಈ ಮೂಲಕ ಸೂಚಿಸಲಾಗಿದೆ.**

ಬ್ಯಾಂಕಿನೊಳಗೆ ಹೆಜ್ಜೆ ಹಾಕಿ, ಬಡತನವ ಹೊರಗೆ ನೂಕಿ.